# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

₹ 5/-

Nesaru **Tingalole** **Vol XXXII - 6** **June 2014**

PAGES 16




ಶ್ರೀ ಸಾಹಿತ್ಯ, ಸಾಮ್ರಾಜ್ಯ ನಾಟಕ ಮಂಡಳಿ ಬೆಂಗಳೂರು ಮತ್ತು ಮೈಸೂರು ಅಸೋಸಿಯೇಷನ್, ಮುಂಬೈ

ಇವರ ವತಿಯಿಂದ

ಪ್ರೊ. ಕೇಶವ್ ಮುತಾಲಿಕ್‌ರವರಿಗೆ ಶ್ರೀ ಎಂ. ವಿ. ಸುಬ್ಬಯ್ಯ ನಾಯ್ಡು ಪ್ರಶಸ್ತಿ ಪ್ರದಾನಿಸಿದ ಸಂದರ್ಭ.

**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574

Email : mysoreassociation.mumbai@gmail.com




ಮೈಸೂರು ಅಸೋಸಿಯೇಷನ್‌ನ ಸದಸ್ಯೆಯಾದ ಶ್ರೀಮತಿ ಉಮಾ ಪ್ರಭಾಕರ ರಾವ್ ಅವರ 'ವನಜಮ್ಮನ ಸೀಟು' ಪುಸ್ತಕ ಬಿಡುಗಡೆ ಸಮಾರಂಭವು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು.

## ಮುಂಬಯಿ ಕನ್ನಡ ರಂಗಭೂಮಿಗೆ ವಿಶಿಷ್ಟ ಸೇವೆ ಸಲ್ಲಿಸಿದ ಕಲಾವಿದರಿಗೆ ಪ್ರಶಸ್ತಿ ಪ್ರದಾನ





ಮೈಸೂರು ಅಸೋಸಿಯೇಷನ್ ಮುಂಬೈಯು, ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ ಬೆಂಗಳೂರು ಇವರ ಜೊತೆಗೂಡಿ ದಿನಾಂಕ ಮೇ 18ರಂದು ಸಂಜೆ 5 ಗಂಟೆಗೆ ಮೈಸೂರು ಅಸೋಸಿಯೇಷನ್‌ನ ಸಭಾಗೃಹದಲ್ಲಿ ಕನ್ನಡ ರಂಗಭೂಮಿಗೆ ವಿಶಿಷ್ಟ ಸೇವೆ ಸಲ್ಲಿಸಿರುವ ಕಲಾವಿದರಿಗೆ ಕರ್ನಾಟಕದ ಮಹಾನ್ ರಂಗ ಚೇತನಗಳ ನೆನಪಿನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀನಿವಾಸ್ ಜಿ. ಕಪ್ಪಣ್ಣ ಹಾಗೂ ಬ್ರಹ್ಮ ಚಾರಿಟೆಬಲ್ ಟ್ರಸ್ಟ್‌ನ ವಿಶ್ವಸ್ತೆ ಶ್ರೀಮತಿ ಗಿರಿಜಾ ಲೋಕೇಶ್ ಅವರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಂಬಯಿಯ ಖ್ಯಾತ ಸಾಹಿತಿ ಶ್ರೀ ವ್ಯಾಸರಾವ್ ನಿಂಜೂರು ಅವರು ವಹಿಸಿದ್ದರು.

ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಶ್ರೀ ಎಂ. ವಿ. ಸುಬ್ಬಯ್ಯ ನಾಯ್ಡು ಪ್ರಶಸ್ತಿ'ಯನ್ನು ಶ್ರೀರಂಗರ ಸ್ಪಷ್ಟ ರಂಗಸ್ವರೂಪವನ್ನು ಮುಂಬಯಿಯ ಕನ್ನಡಿಗರಿಗೆ ಉಣಬಡಿಸಿದ ಮುಂಬಯಿ ಕರ್ನಾಟಕ ಥಿಯೇಟರ್ಸ್‌ನ ಪ್ರಮುಖ ಕಲಾವಿದರಾದ ಪ್ರೊ. ಕೇಶವ್ ಮುತಾಲಿಕ್ ಅವರಿಗೆ ಪ್ರದಾನಿಸಲಾಯಿತು.

'ಶ್ರೀಮತಿ ಲಕ್ಷ್ಮೀಬಾಯಿ ಪ್ರಶಸ್ತಿ'ಯನ್ನು ರಂಗಭೂಮಿ ಹಾಗೂ ಚಲನಚಿತ್ರಗಳಲ್ಲಿ

*(ಪುಟ 15ಕ್ಕೆ)*

ಗೌ. ಸಂಪಾದಕರು :
**ಡಾ. ಜ್ಯೋತಿ ಸತೀಶ್**

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**
**ನೀಲಕಂಠ ಮೇಡರ್**

ಬೆಂಗಳೂರು ಪ್ರತಿನಿಧಿ :
**ಎಂ.ಎ.ಎನ್. ಪ್ರಸಾದ್**

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.
*- Ed.*

ಸಂಪರ್ಕ ವಿಳಾಸ :
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

# ನೇಸರು
## ತಿಂಗಳೋಲೆ

**ಸಂಪುಟ 31** **ಜೂನ್ 2014** **ಸಂಚಿಕೆ 6**

## ಆತ್ಮಸ್ಥೈರ್ಯವನ್ನು ರೂಢಿಸಿಕೊಳ್ಳಿ

ಆತ್ಮಸ್ಥೈರ್ಯ ಮನುಷ್ಯನ ಬದುಕಿನಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಆತ್ಮಸ್ಥೈರ್ಯ ಇಲ್ಲದಿದ್ದರೆ ಮನುಷ್ಯನಿಗೆ ಬದುಕಲು ಸಾಧ್ಯವಿಲ್ಲ. ಇನ್ನು ಕೆಲವರು ಬಂದದ್ದೆಲ್ಲ ಬರಲಿ ಭಗವಂತನ ದಯೆಯೊಂದಿರಲಿ ಎಂದು ನಗು ನಗುತ್ತಾ ಬಾಳುವುದನ್ನು ಕಾಣಬಹುದು. ಆತ್ಮಸ್ಥೈರ್ಯದಿಂದ ನಮ್ಮಲ್ಲಿರುವ ಊನತೆಗಳು ಅಥವಾ ದೌರ್ಬಲ್ಯಗಳು ನಮಗೆ ಗೊತ್ತಿಲ್ಲದಂತೆ ಗೌಣವಾಗಿ ಬಿಡುತ್ತದೆ. ನಮ್ಮ ಮನೋಬಲ ದೃಢವಾಗಿದ್ದರೆ ಎಂತಹ ಕಠಿಣ ಪರಿಸ್ಥಿತಿಯಲ್ಲೂ ನಮ್ಮ ಮನಸ್ಸು ಹಿಂದೆ ಸರಿಯುವುದಿಲ್ಲ.

ಆತ್ಮ ಸ್ಥೈರ್ಯ ಎಂದಾಕ್ಷಣ ಒಂದು ಘಟನೆ ನನ್ನ ಕಣ್ಣು ಮುಂದೇ ಹಾದು ಹೋಗುತ್ತದೆ. ದಿನವೂ ಟ್ರೈನಿನಲ್ಲಿ ಪ್ರಯಾಣಿಸುತ್ತಿರುವ ಸಂದರ್ಭದಲ್ಲಿ ಒಂದು ಸಿಂಧಿ ಮಹಿಳೆಯನ್ನು ನೋಡುತ್ತಿದ್ದೆ. ಆಕೆ ತಾನು ಇಳಿಯುವ ಸ್ಟೇಷನ್ ಬರುವ ತನಕ ತನ್ನ ಜೊತೆಗಿದ್ದವರನ್ನು ನಕ್ಕು ನಗಿಸುತ್ತಿದ್ದಳು. ಮತ್ತು ತಪ್ಪದೇ ಎಲ್ಲರಿಗೂ ತಾನು ತಂದ ಬೆಳಗಿನ ತಿಂಡಿಯನ್ನು ಹಂಚಿ ತಿನ್ನುತ್ತಿದ್ದಳು. ಆಕೆಯದು ಯಾವಾಗಲೂ ನಗುಮುಖ. ಆಕೆಯ ಮುಖವನ್ನು ನೋಡಿದಾಕ್ಷಣ ನಮಗೇ ಅರಿವಿಲ್ಲದಂತೆ ನಮ್ಮ ಮುಖದಲ್ಲಿ ಮಂದಹಾಸ ಮೂಡುತ್ತದೆ. ಹೀಗೆ ಸ್ವಲ್ಪ ದಿನದ ನಂತರ ನನಗೆ ಒಂದು ವಿಷಯ ತಿಳಿಯಿತು ಆಕೆಯ ಒಬ್ಬನೇ ಒಬ್ಬ ಮಗ, ಅದು ಹತ್ತೊಂಬತ್ತು ವರ್ಷ ಪ್ರಾಯದ ಮಗ ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದನು. ಈಗ ಆಕೆಯ ಮನೆಯಲ್ಲಿರುವುದು ಆಕೆ ಮತ್ತು ಆಕೆಯ ಪತಿ. ಆಕೆಯ ಪ್ರಕಾರ ಎಲ್ಲವೂ ಭಗವಂತನ ಕೈಯಲ್ಲಿದೆ. ಅವನೇ ಕೊಟ್ಟದು, ಅವನೇ ತೆಗೆದುಕೊಂಡ. ಸ್ವಲ್ಪ ಸಮಯವಾದರೂ ಮಗನನ್ನು ನಮ್ಮೊಂದಿಗೆ ಇರುವ ಭಾಗ್ಯವನ್ನು ಕಲ್ಪಿಸಿದನಲ್ಲ ಅಷ್ಟು ಸಾಕು. ಅವನು ಎಲ್ಲಿಗೂ ಹೋಗಿಲ್ಲ, ನಮ್ಮೊಳಗೆಯೇ ಇದ್ದಾನೆ. ಇನ್ನೊಬ್ಬರ ಮುಖದ ನಗುವಿನಲ್ಲಿ ನಾನು ನನ್ನ ಮಗನ ಮುಖವನ್ನು ಕಾಣುತ್ತೇನೆ. ಅದಕ್ಕಾಗಿ ಅಂದೇ ತೀರ್ಮಾನಿಸಿದೆ ಸದಾ ನಗು ನಗುತ್ತಾ ನನ್ನ ಮುಂದಿನ ಜೀವನವನ್ನು ಕಳೆಯುತ್ತೇನೆ ಎಂದು. ಆಕೆಯ ಮಾತಿನಲ್ಲಿ ಎಂತಹ ಶಕ್ತಿಯಿದೆ! ಒಂದು ಕ್ಷಣ ಆಕೆಯ ಆತ್ಮಸ್ಥೈರ್ಯಕ್ಕೆ, ಬದುಕುವ ರೀತಿಗೆ ತಲೆಬಾಗಲೇ ಬೇಕು ಎಂದೆನಿಸಿತು.

ನಮ್ಮ ದೌರ್ಬಲ್ಯಗಳನ್ನೇ ವೈಕಲ್ಯಗಳೆಂದು ಭಾವಿಸುವ ನಾವು ಯಶಸ್ಸಿನೆಡೆಗೆ ದಾಪುಗಾಲಿಡುತ್ತ ಸಾಗುವಾಗ ಎಡವಿ ಬೀಳುವುದು ಸಹಜ. ಅಲ್ಲಿಂದ ಮುಂದೆ ಸಾಗುವ ಪ್ರಯತ್ನ ಮಾಡುವುದೇ ಇಲ್ಲ. ಆದರೆ ತಮ್ಮ ವೈಫಲ್ಯಗಳನ್ನೇ 'ವೈಕಲ್ಯ'ಗಳೆಂದು ಭಾವಿಸದೆ ಸಾಫಲ್ಯತೆಯೆಡೆಗೆ ಹೆಜ್ಜೆ ಹಾಕುತ್ತಿರುವ ಸುಕೋಮಲ ಮನಸ್ಸುಗಳನ್ನು ಈ ಜಗತ್ತು ಕಂಡಿದೆ ಎನ್ನುವುದನ್ನು ನಾವು ಕಡೆಗಣಿಸುವಂತಿಲ್ಲ. ನಮ್ಮಲ್ಲಿ ಎಲ್ಲ ತರಹ ಜೀವನವನ್ನು ನಡೆಸುತ್ತಿರುವವರು ಇದ್ದಾರೆ. ರಾತ್ರಿ ಬೆಳಗಾಗುವುದರೊಳಗೆ ನನಗೆ ಆತ್ಮಸ್ಥೈರ್ಯ ಬರಬೇಕೆಂದು ಬಯಸುವುದು ನಮ್ಮ ಮೂರ್ಖತನವಷ್ಟೇ. ಇನ್ನು ಕೆಲವರಿಗೆ 'ಆತ್ಮಸ್ಥೈರ್ಯ' ಎಂಬ ಪದದ ಪರಿಚಯವೇ ಇಲ್ಲವೆಂದರೂ ತಪ್ಪಾಗಲಿಕ್ಕಿಲ್ಲ. ಆತ್ಮಸ್ಥೈರ್ಯವನ್ನು ರೂಢಿಸಿಕೊಳ್ಳಬೇಕೆಂದು ದಿನವಿಡಿ ಅದರ ಬಗ್ಗೆನೇ ಯೋಚಿಸಿದರೂ ಅದು ನಮ್ಮ ಪಾಲಿಗೆ ದಕ್ಕುವುದಿಲ್ಲ. ಬದುಕಿನಲ್ಲಿ ಎದುರಾಗುವ ಸವಾಲುಗಳಿಗೆ ಭಯಪಡದೆ ಧೈರ್ಯದಿಂದ ಎದುರಿಸುತ್ತಾ ಹೋದಂತೆ ನಮ್ಮಲ್ಲಿ ಒಂದು ರೀತಿಯ ಆತ್ಮಸ್ಥೈರ್ಯ ಉದ್ಭವವಾಗುತ್ತದೆ. ಹೋದ ಸಲ ಬಂದ ಕಷ್ಟಕಿಂತ ಇದೆಂತ ಮಹಾನ್! ಇದನ್ನು ಎದುರಿಸಿಯೇ ತೀರುತ್ತೇನೆಂಬ ಒಂದು ರೀತಿಯ ಛಲ ನಮ್ಮ ಮನದಲ್ಲಿ ಮೊಳಕೆಯೊಡೆಯಲು ಶುರುವಾಗುತ್ತದೆ. ಒಪ್ಪಿಸಿದ ಕೆಲಸವನ್ನು ಹಾಗೋ ಹೀಗೋ ಮುಗಿಸಿಬಿಡುವಂತಹದ್ದನ್ನು ನಾವು ಬಹಳಷ್ಟು ಮಂದಿ ರೂಢಿಸಿಕೊಂಡು ಬಿಟ್ಟಿದ್ದೇವೆ. ಆದರೆ ನಿರ್ದಿಷ್ಟವಾಗಿ ಈ ಕೆಲಸವನ್ನೇ ಮಾಡುತ್ತೇನೆ, ಇದನ್ನು ಮಾಡಲು ನಾನೇ ಯೋಗ್ಯವಾದ ವ್ಯಕ್ತಿಯೆಂದು ವಿಶ್ವಾಸವಿಟ್ಟು ಒಂದು ನಿರ್ದಿಷ್ಟ ಸಮಯದಲ್ಲಿ ಅದನ್ನು ಅಚ್ಚುಕಟ್ಟಾಗಿ ಮುಗಿಸಲು ಅಗತ್ಯವಿರುವ ಅಂಶವೇ ಆತ್ಮಸ್ಥೈರ್ಯ. ಇದು ನಮ್ಮ ಬದುಕಿನ ಅವಿಭಾಜ್ಯ ಅಂಗವೆಂದು ಪರಿಗಣಿಸಿ, ಆತ್ಮಸ್ಥೈರ್ಯದಿಂದೊಡಗೂಡಿದ ಪ್ರಯತ್ನದಲ್ಲಿ ತೊಡಗಿಸಿಕೊಂಡಾಗ ಮಾತ್ರ ನಮಗೆ ಯಶಸ್ಸು ಸಿಗಲು ಸಾಧ್ಯ. ಯಾವುದೇ ವ್ಯಕ್ತಿ ಸಾಧಕರಾಗಬೇಕಾದಲ್ಲಿ ಆತ್ಮಸ್ಥೈರ್ಯ ಆತ್ಮವಿಶ್ವಾಸ , ನಿರಂತರ ಪರಿಶ್ರಮ ಅತ್ಯಗತ್ಯ. ನಮ್ಮ ವ್ಯಕ್ತಿತ್ವಕ್ಕೆ ನಮ್ಮದೇ ಆದ ಛಾಪನ್ನು ರೂಪಿಸಿಕೊಳ್ಳಬೇಕಾದರೆ ನಮ್ಮ ದೌರ್ಬಲ್ಯದ ವಿರುದ್ಧ ನಾವೇ ಹೋರಾಟ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನನಗೆ ಅಡಿಗರ ಒಂದು ಕವನದ ಸಾಲು ನೆನಪಾಗುತ್ತದೆ.

"ಎಲ್ಲಕ್ಕಿಂತ ಮುಖ್ಯವಾಗಿ, ನಿರಂತರವಾಗಿ ತಾನೇ
ತನ್ನ ವಿರುದ್ಧ ಸಾರಬೇಕಾಗುತ್ತದೆ ಧರ್ಮಯುದ್ಧ ಜೀವನದುದ್ದ"

ಬೀಜ ಹಾಕಿದ ಕೂಡಲೇ ಅದು ಮರವಾಗುವುದಿಲ್ಲ. ಅದು ಮೊಳಕೆಯೊಡೆದು ಗಿಡವಾಗಿ ಬೆಳೆಯುತ್ತಾ ಬೃಹದಾಕಾರ ಪಡೆಯುವುದು. ಹಾಗೆಂದು ತನಗಿಂತ ಎತ್ತರವಾಗಿ ಬೆಳೆದ ಮರವನ್ನು ನೋಡಿ ಆಗಷ್ಟೇ ಮೊಳಕೆಯೊಡೆದು ಹೊರಬರುತ್ತಿರುವ ಸಸ್ಯ ಹೆದರಿ ಮುದುಡಿಕೊಳ್ಳುವುದಿಲ್ಲ. ಅದಕ್ಕೆ ಅದರ ಸಾಮರ್ಥ್ಯದ ಮೇಲೆ ಪೂರ್ಣ ವಿಶ್ವಾಸವಿದೆ. ಇಷ್ಟು ಎತ್ತರದ ಮರದ ನಡುವೆ ತನ್ನ ಅಸ್ತಿತ್ವ ಇಲ್ಲ ಎಂದು ಭಾವಿಸುವುದಿಲ್ಲ. ಪ್ರಕೃತಿಯಲ್ಲಿ ತನಗೆ ಸಿಕ್ಕಿದ ಜಾಗವನ್ನು ಸಂಪೂರ್ಣ ವಿನಿಯೋಗಿಸಿಕೊಳ್ಳುತ್ತದೆ. ಆದರೆ ನಾವು ಮನುಷ್ಯರು ನಮ್ಮೊಳಗೆ ಶಕ್ತಿ ಇದ್ದರೂ ಅದರ ಅರಿವಿದ್ದರೂ ನನ್ನಿಂದ ಇದು ಸಾಧ್ಯವಾಗಬಹುದೇ ಎಂದು ಯೋಚಿಸುತ್ತಾ ಹಿಂದೆ ಸರಿಯುತ್ತೇವೆ. ಇದರಿಂದ ನಮಗೆ ದಕ್ಕಬೇಕಾದ ಅವಕಾಶಗಳು ನಮ್ಮ ಕೈತಪ್ಪಿ ಹೋಗುವ ಸಾಧ್ಯತೆ ಇದೆ. ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆ. ಅದನ್ನು ರೂಪಿಸುವವರು ನಾವೇ. ಆತ್ಮಸ್ಥೈರ್ಯವನ್ನು ನಿಮ್ಮ ಬದುಕಿನಲ್ಲಿ ರೂಢಿಸಿಕೊಳ್ಳುವುದರಿಂದ ನಿಮ್ಮ ಬಾಳು ಉಜ್ವಲವಾಗುವುದು. "ಯಾರು ತಮ್ಮೊಳಗೆ ಒಂದು ಅಗಾಧವಾದ ಶಕ್ತಿಯನ್ನು ಸಾಂದರ್ಭಿಕತೆಗಿಂತ ದೊಡ್ಡದೆಂದು, ಸ್ಥೈರ್ಯದಿಂದ ನಂಬಿರುತ್ತಾರೋ, ಅಂತಹವರನ್ನು ಬಿಟ್ಟು, ಬೇರಾರಿಂದಲೂ ಪ್ರಶಂಸನೀಯವಾದುದನ್ನು ಎಂದೂ ಸಾಧಿಸಲಾಗಿಲ್ಲ" ಎನ್ನುವ ಬ್ರೂಸ್ ಬಾರ್ಟನ್ ಅವರ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

**– ಡಾ. ಜ್ಯೋತಿ ಸತೀಶ್**

# ಕಲಿಯುವ ಕೈಗೆ ಮೊಬೈಲ್ ಯಾಕೆ

*ಸ್ಮೈಲು... ಸ್ಮೈಲು... ಸ್ಮೈಲು... ಕೈಲಿದ್ರೆ ಮೊಬೈಲು...*
*ಸ್ಟೈಲು... ಸ್ಟೈಲು... ಸ್ಟೈಲು... ಕೈಲಿದ್ರೆ ಮೊಬೈಲ್...*

ಹೌದು, ಇಂದು ಅಗಾಧ ತಾಂತ್ರಿಕ ಮುನ್ನಡೆಯ ಯುಗದ ಅನುಪಮ ಆವಿಷ್ಕಾರ ಈ ಮೊಬೈಲ್. ಹಳ್ಳಿ ಪಟ್ಟಣಗಳ ಎಲ್ಲೆ ಮೀರಿ ಎಲ್ಲೆಂದರಲ್ಲಿ ಇದರ ಬಳಕೆ ವ್ಯಾಪಕವಾಗಿದೆ. ಆದರೆ, ಕಲಿಯುವ ಕೈಗೆ ಮೊಬೈಲ್ ಬೇಕೆ? ಎಂಬುದು ಪಾಲಕ-ಪೋಷಕರು ಯೋಚಿಸಬೇಕಾದ ವಿಷಯವಾಗಿದೆ.

ಹಿಂದೆ ಶ್ರೀಮಂತರ ಕೈಗೆ ಮಾತ್ರ ಮೀಸಲಾಗಿದ್ದ ಮೊಬೈಲ್ ಇಂದು ನಾಯಿ ಬಾಲದಲ್ಲೂ ಕಾಣುತ್ತಿರುವುದು ಯುಗದ ಪರಿವರ್ತನೆಗೆ ಸಾಕ್ಷಿಯಾಗಿದೆ. ಮೊಬೈಲ್ ಇಂದು ಚಿಕ್ಕ ಮಕ್ಕಳಿಂದ ಹಿಡಿದು ಅಜ್ಜಂದಿರವರೆಗೆ ಅವಶ್ಯಕ ಸಾಧನವಾಗಿ ಪರಿಣಮಿಸಿದೆ. ಜಾಗತೀಕರಣ ಹಾಗೂ ಖಾಸಗೀಕರಣದ ಪರಿಣಾಮದಿಂದಾಗಿ ಕಡಿಮೆ ದರದಲ್ಲಿ ಮೊಬೈಲ್ ಸಂಪರ್ಕವು ದೊರೆಯುವುದರಿಂದ ಇಂದು ಎಲ್ಲರ ಕೈಗಳಲ್ಲಿ ಮೊಬೈಲ್ ರಾರಾಜಿಸುವಂತಾಗಿದೆ.

ಆಟವಾಡುವ ಮುಗ್ಧ ಮನಸ್ಸಿನ ಪುಟ್ಟ ಮಗುವಿಗೆ ಹೊಸ ಆಟಿಕೆಗಳನ್ನು ತಂದುಕೊಟ್ಟಾಗ ಆಗುವ ಸಂತೋಷ ವರ್ಣಿಸಲು ಅಸಾಧ್ಯ. ತನ್ನ ಕೈಗೆ ಆಟಿಕೆ ಬಂದಾಗ ಅದನ್ನೇ ತನ್ನ ಸರ್ವಸ್ವ ಎಂದು ತಿಳಿಯುತ್ತದೆ. ತಾನಾಡುವ ಮಾತು, ಕೃತಿ ಎಲ್ಲವೂ ತನ್ನ ಆಟದ ಸಾಮಾನಿನ ಬಗ್ಗೆಯೇ ಇರುತ್ತದೆ. ಇದೇ ಅದರ ಪ್ರಪಂಚ. ತಾಯಿ ಕೈತುತ್ತು ತಿನ್ನಿಸಿದರೂ ತಿಳಿಯದಷ್ಟು ತನ್ಮಯತೆ. ಕೆಲವೊಮ್ಮೆ ನಿದ್ದೆಯಿಂದ ಎಚ್ಚೆತ್ತು ಹುಡುಕುವುದಿದೆ. ಒಟ್ಟಿನಲ್ಲಿ ಮಗುವಿನ ಭ್ರಮಾಲೋಕದ ಆಟ ಈ ಆಟಿಕೆಯೇ. ಪ್ರಸ್ತುತ ಕಲಿಯುವ ಮಕ್ಕಳ ಕೈಯಲ್ಲಿ ಕಾಟ ಕೊಡುವ ರೂಪದಲ್ಲಿ ಮೊಬೈಲ್ ಇರುವುದರಿಂದ ಇಬ್ಬರ ಮನಸ್ಥಿತಿಯೂ ಒಂದೇರೀತಿಯದ್ದಾಗಿದೆ.

ವಿದ್ಯೆ ಕಲಿತು ಭವಿಷ್ಯ ರೂಪಿಸಿಕೊಳ್ಳಬೇಕಾದ ಈ ಹಂತದಲ್ಲಿ ಮೊಬೈಲ್ ಎನ್ನುವ ಭೂತದಿಂದಾಗಿ ಮಕ್ಕಳು ಅಡ್ಡದಾರಿ ಹಿಡಿಯುತ್ತಿದ್ದಾರೆ. ಮೊಬೈಲ್ ನಿಜಕ್ಕೂ ಅನುಕೂಲದ ಸಂಪರ್ಕ ಸಾಧನ. ಆದರೆ, ಅತಿಯಾದರೆ ಅಮೃತವೂ ವಿಷ ಎಂಬಂತೆ ವಿದ್ಯಾರ್ಥಿಗಳ ಪಾಲಿಗೆ ಇದು ಒಂಥರ ದುರುಪಯೋಗದ ವಸ್ತುವೇ ಆಗಿದೆ. ಮಕ್ಕಳು ಮೊಬೈಲ್‌ನ್ನು ಅತ್ಯಾವಶ್ಯಕ ವಸ್ತುವನ್ನಾಗಿ ಮಾಡಿಕೊಂಡಿರುವುದರಿಂದ ತರಗತಿಯಲ್ಲಿ ಪಾಠದಲ್ಲಿ ತಲ್ಲೀನರಾಗುವ ಬದಲು ಮೊಬೈಲ್‌ನಲ್ಲಿ ಲೀನವಾಗಿ ಬಿಡುತ್ತಿದ್ದಾರೆ.

ಪ್ರಸ್ತುತ ದಿನಗಳಲ್ಲಿ ಮನೆಮನೆಗಳಲ್ಲೂ ಓದುವ, ಬರೆಯುವ ನೆಪವೊಡ್ಡಿ ಬಾಗಿಲು ಚಿಲಕ ಹಾಕಿಕೊಂಡು ಗಂಟೆಗಟ್ಟಲೆ ಹರಟೆ ಹೊಡೆಯುವ ಮನಸ್ಸುಗಳೆಷ್ಟು ಎನ್ನುವುದು ಎಲ್ಲರಿಗೆ ತಿಳಿದ ವಿಷಯ. ಎಲ್ಲಿ ನೋಡಿದರೂ ಶಾಲಾ-ಕಾಲೇಜು ವಿದ್ಯಾರ್ಥಿಗಳ ಕೈಯಲ್ಲಿ ಮೊಬೈಲ್. ಇದೀಗ ಮೊಬೈಲ್ ಉಪಯೋಗವೊಂದು ಫ್ಯಾಶನ್ ಆಗಿಬಿಟ್ಟಿದೆ. ತಮ್ಮ ಮಕ್ಕಳ ಅಗತ್ಯವನ್ನು ಪೂರೈಸುವ ಹೆತ್ತವರ ಆದ್ಯತೆ ಇರಬಹುದು. ಆದರೆ, ಅದನ್ನು ಕೊಡಿಸುವ ಮೊದಲು ಮಕ್ಕಳಿಗೆ ಮೊಬೈಲ್‌ನ ಅವಶ್ಯಕತೆ ಇದೆಯೇ ಅಥವಾ ಇಲ್ಲವೆ ಎಂಬುದನ್ನು ಯೋಚಿಸಬೇಕು. ಫೀಸು, ಪುಸ್ತಕಗಳಿಗೆ ಹಣ ಒದಗಿಸಲು ಕಷ್ಟವಾಗಿರುವಾಗ ಕಲಿಯುವ ಮನಸ್ಸಿನಲ್ಲಿ ಅಗತ್ಯವಿಲ್ಲದ ಮೊಬೈಲ್ ಬೀಜವನ್ನು ಬಿತ್ತುವವರೇ ಹೆತ್ತವರು.

**ಮೊಬೈಲ್ ಮಾರಕ ರೋಗಗಳಿಗೆ ಆಹ್ವಾನ : -**

ಮಕ್ಕಳು ಸದಾ ಮೊಬೈಲ್‌ನ್ನು ಕಿವಿಗಂಟಿಸಿಕೊಂಡಿರುವವರಾದರೆ ಈ ಸುದ್ದಿ ನಿಮಗೊಂದು ಎಚ್ಚರಿಕೆಯ ಕರೆಘಂಟೆಯಾಗಿದೆ. ಮೊಬೈಲ್ ಬಳಕೆಯಿಂದಾಗಿ ಜ್ಞಾಪಕ ಶಕ್ತಿ ನಷ್ಟ, ಏಕಾಗ್ರತೆ ಕುಸಿತ, ಅಜೀರ್ಣ, ನಿದ್ರಾಹೀನತೆ ಈ ಮುಂತಾದ ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳಾಗುತ್ತವೆ ಎಂದು ಸಂಪರ್ಕ ಮತ್ತು




ಮಾಹಿತಿ ತಂತ್ರಜ್ಞಾನ ಸಚಿವಾಲಯ ಮೊಬೈಲ್ ಫೋನ್‌ಗಳ ಅಪಾಯವನು ಅಧ್ಯಯನ ಮಾಡಲು ರಚಿಸಿದ ಸಮಿತಿಯೊಂದು ತಿಳಿಸಿದೆ.

ಸತತವಾಗಿ ಮೊಬೈಲ್ ಫೋನ್‌ಗಳನ್ನು ಬಳಸುವವರು ತಲೆಯ ಚರ್ಮದ ಉರಿ, ಬಳಲಿಕೆ, ಏಕಾಗ್ರತೆಯ ಕೊರತೆ, ಕಿವಿಯಲ್ಲಿ ರಿಂಗಣ, ಜ್ಞಾಪಕ ಶಕ್ತಿ ನಷ್ಟ, ತಲೆನೋವು, ತಲೆ ಸುತ್ತು, ಹೃದಯದ ಬಡಿತದಲ್ಲಿ ಏರುಪೇರು ಮೊದಲಾದ ಅಪಾಯಗಳಿಗೆ ತುತ್ತಾಗುತ್ತಾರೆ. ಮಕ್ಕಳು, ಗರ್ಭಿಣಿಯರು, ರೋಗಿಗಳು, ವೈದ್ಯಕೀಯ ಉಪಕರಣಗಳನ್ನು ಅಳವಡಿಸಿಕೊಂಡಿರುವವರು ಮೊಬೈಲ್ ಫೋನುಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಬೇಕು ಎಂದು ಸಮಿತಿ ಸಲಹೆ ಮಾಡಿದೆ.

**ಕಾಣದಂತೆ ಮಾಯವಾದವುಗಳು : -**

ಚಿಟ್ಟೆ, ಜೇನ್ನೊಣ, ಕೀಟ ಮತ್ತು ಗುಬ್ಬಚ್ಚಿಗಳು ನಾಪತ್ತೆಯಾಗಲು ಕೂಡ ಮೊಬೈಲ್ ಫೋನ್‌ನ ವಿಕಿರಣವೇ ಕಾರಣ ಎಂದು ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ವರದಿ ಹೇಳಿದೆ. ಆರೋಗ್ಯ ಸಚಿವಾಲಯ, ಜೈವಿಕ ತಂತ್ರಜ್ಞಾನ ಇಲಾಖೆ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕಾರ್ಯದರ್ಶಿಯವರನ್ನೊಳಗೊಂಡಿರುವ ಎಂಟು ಮಂದಿಯ ಸಮಿತಿ ರೇಡಿಯೋ ವಿಕಿರಣಗಳನ್ನು ಹೀರಿಕೊಳ್ಳುವ ಮಾನದಂಡವನ್ನು ಅನುಸರಿಸದಿರುವ ಮೊಬೈಲ್ ಫೋನ್ ಉಪಕರಣಗಳನ್ನು ನಿಷೇದಿಸಲು ಶಿಫಾರಸು ಮಾಡಿದೆ.

**✍ ದಿನೇಶ್ ಶೆಟ್ಟಿ ರೆಂಜಾಳ್**

ನಿಬಿಡ ಜನದಟ್ಟಣೆಯ ವಸತಿ ಪ್ರದೇಶಗಳು, ಶಾಲೆಗಳು, ಮೈದಾನ ಮತ್ತು ಆಸ್ಪತ್ರೆಗಳ ಬಳಿ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಬಾರದೆಂದು ಸಮಿತಿ ಹೇಳಿದೆ. ಭಾರತಕ್ಕೆ ಸ್ಥಳೀಯವಾಗಿ ಪ್ರತಿ ಕಿ. ಗ್ರಾಂ.ಗೆ 2 ವ್ಯಾಟ್ ಎಸ್‌ಎಆರ್ ನಿರ್ಧರಿಸಲಾಗಿದೆ. ಎಸ್‌ಎಆರ್ ಮೌಲ್ಯ ಅಧಿಕವಾದಂತೆ ಅದರಿಂದುಟಾಗುವ ಅಪಾಯವೂ ಹೆಚ್ಚಾಗುತ್ತದೆ. ಎಸ್‌ಎಆರ್ ಮಟ್ಟವನ್ನು ವ್ಯಾಟ್‌ಗಿಳಿಸಲು ಈ ಸಮಿತಿ ಶಿಫಾರಸು ಮಾಡಿದೆ. ಮೊಬೈಲ್ ಬಳಸುವ ವ್ಯಕ್ತಿಯ ತಲೆ ಹೆಚ್ಚು ಬಿಸಿಯಾಗುತ್ತದೆ. ಅಂದರೆ ತಲೆಯ ಮೇಲ್ಪದರಕ್ಕೆ ಹೆಚ್ಚಿನ ಉಷ್ಣತೆ ರವಾನೆಯಾಗುತ್ತದೆ. ಇದರಿಂದ ದೇಹದ ಉಷ್ಣತೆಯಲ್ಲಿ ಕೆಲವು ದಶಮಾಂಶ ಡಿಗ್ರಿಯಷ್ಟು ಹೆಚ್ಚಳವಾಗಿ ಈ ಉಷ್ಣತೆಯನ್ನು ಹೊರ ಹಾಕಲು ರಕ್ತದ ಪರಿಚಲನೆ ತೀವ್ರವಾಗುತ್ತದೆ ಎಂಬ ವೈಜ್ಞಾನಿಕ ವಿವರಣೆಯನ್ನು ಈ ಸಮಿತಿ ನೀಡಿದೆ. ಮೊಬೈಲ್ ಫೋನುಗಳು ಬಿಡುಗಡೆ ಮಾಡುವ ಎಲೆಕ್ಟ್ರೋಮ್ಯಾಟಿಕ್ ತರಂಗಗಳು ದೇಹದ ಜೀವಕಣಗಳ ಮೇಲೆ ಬೀರುವ ಪರಿಣಾಮ ಹೆಚ್ಚು ಹಾನಿಕಾರಕ. ಒಟ್ಟಿನಲ್ಲಿ ಮೊಬೈಲ್ ಉಪಯೋಗಿಸುವವರು ಇದರ ಬಗ್ಗೆ ಸ್ವಲ್ಪ ಗಮನ ಹರಿಸುವುದು ಮುಖ್ಯ. ಅದರಲ್ಲೂ ಕಲಿಯುವ ಮಕ್ಕಳ ಕೈಗೆ ಮೊಬೈಲ್ ನೀಡಿದರೆ ಮಾರಕ ರೋಗಗಿಗೆ ಆಹ್ವಾನವಿದ್ದಂತೆ ಎಚ್ಚರ. ■

## ಸ್ನೇಹ

**ಚಂದ್ರನ ಕಂಡು ತಾವರೆ ನಕ್ಕಂತೆ**
**ದುಂಬಿ ಹೂವನ್ನು ಅರಸಿದಂತೆ**
**ಹಾಡು ಶೃತಿಗೆ ಹಂಬಲಿಸಿದಂತೆ**
**ನೀ ಸಿಕ್ಕೆ, ನನ್ನ ಶೇಹಿತೆ ನಾ ಬಯಸಿದಂತೆ**

**– ಸಿಂದು ಎಸ್. ಪಿ. ಸಖರಾಯಪಟ್ಟಣ**

# ಮಾಯಾನಗರಿಯ ಮಾದಕ ಲೋಕದ ಸುತ್ತ...

ರವಿ ಜಾರಿ ಶಶಿ ಮೂಡಿದಾಗ ಕಾಂಕ್ರೀಟು ಕಾಡು ಮುಂಬಯಿ ತನ್ನ ವೇಗವನ್ನು ಹೆಚ್ಚಿಸಿಕೊಳ್ಳತೊಡಗುತ್ತದೆ. ದಿನದ ಕೆಲಸ ಮುಗಿಸಿ ಮನೆಯವರೊಂದಿಗೆ ಸಮಯ ಕಳೆಯಲು ಧಾವಿಸುವ ಒಂದು ವರ್ಗ; ಗೆಳೆಯರೊಂದಿಗೆ ಹರಟೆ ಹೊಡೆಯುತ್ತ ಪತ್ನಿಯ ಎಲ್ಲಾ ಧಾರಾವಾಹಿಗಳು ಮುಗಿದ ನಂತರ ಮನೆ ಸೇರುವ ಇನ್ನೊಂದು ಬಳಗ; ದಿನದ ಪರಿಶ್ರಮದ ವಿಶ್ರಾಂತಿಯ ಸಬೂಬು ನೀಡಿ ಬೇಸರ, ಟೆನ್ಶನ್ ಕಳೆಯುವ ಔಷದಿಯಾಗಿ ನಿಶೆಯಲ್ಲಿ ನಶೆ ಏರಿಸಿಕೊಳ್ಳುವ ಮಾದಕ ವ್ಯಸನಿಗಳ ಚಿತ್ರ ವಿಚಿತ್ರ, ಭಿನ್ನ ವಿಭಿನ್ನ ಬಣ್ಣದ ನಶಾದೇವಿಯ ಮಾದಕ ಲೋಕ... ಈ ಮಾಯಾಲೋಕ.. ಮತ್ತೊಂದಲ್ಲದೆ ಇನ್ನೇನು...!

ಎಂದೂ ವಿಶ್ರಮಿಸದ ಮುಂಬಯಿ ರೈಲು ತನ್ನ ಒಡಲಲ್ಲಿ ನೋವು ನಲಿವನ್ನು ತುಂಬಿಕೊಳ್ಳುತ್ತ ನಿತ್ಯ ಕಾಯಕದಲ್ಲಿ ತೊಡಗಿಕೊಂಡಿರಲು, ಎಂದಿನಂತೆ ಅಂದು ಕೂಡ ತಡ ರಾತ್ರಿಯ ಟ್ರೈನ್ ಏರಿದ ನಾನು ನನ್ನ ನೆಚ್ಚಿನ ವಿಂಡೋ ಸೀಟಿನಲ್ಲಿ ಆಸೀನನಾದೆ. ರೈಲು ಹೊರಟ ಸ್ವಲ್ಪ ಸಮಯದಲ್ಲಿ 'ರೋತೇಹುವೇ.. ಆತೆಯೆ ಸಬ್, ಹಸ್ತಹುವಾ ಜೊ ಜಾಯೆಗಾ ವೊ ಮುಕಂದರ್ ಕಾ ಸಿಕಂದರ್ ಜಾನೆಮನ್ ಕಹಲಾಯೆಗ..' ಎಂಬ ಹಾಡು ಟ್ರೈನ್‌ನ ಮತ್ತೊಂದು ಮೂಲೆಯಿಂದ ಕೇಳತೊಡಗಿತು.

ಕಣ್ಣು ಕಾಣಿಸುತ್ತಿದ್ದರೂ ಕುರುಡರಂತೆ ವರ್ತಿಸುವ ಭಿಕ್ಷುಕರು, ಬಾಡಿಗೆ ಹಸುಳೆಗಳನ್ನು ಜೋಳಿಗೆಯಲ್ಲಿಟ್ಟು ಭಿಕ್ಷೆಬೇಡುವ ಹೆಂಗಸರು, ಕಸ ಗುಡಿಸಿ ಹಣ ಕೇಳುವ ಮಕ್ಕಳು ಇವರೆಲ್ಲರೂ ನನ್ನ ಸ್ಮೃತಿ ಪಟಲದಲ್ಲಿ ಮಿಂಚಿನಂತೆ ಹಾದು ಹೋದರೂ ನಿತ್ಯ ಪ್ರಯಾಣಿಕನಾದ ನನಗೆ ಇದು ಮಾಮೂಲು ವಿಷಯವಾದುದರಿಂದ ಅದರ ಕಡೆಗೆ ಹೆಚ್ಚಿನ ಗಮನ ಕೊಡದ ನಾನು ನನ್ನ ನೆಚ್ಚಿನ ಪತ್ರಿಕೆಯಲ್ಲಿ ಮುಳುಗಿಹೋದೆ. ಹಾಡುತ್ತಾ ಹಾಡುತ್ತಾ ನನ್ನ ಸಮೀಪದಿಂದ ಹಾದು ಹೋಗುವಾಗ ಅವನು ಧರಿಸಿದ್ದ ಬಟ್ಟೆ ಅವನನ್ನೇ ನೋಡುವಂತೆ ನನ್ನನ್ನು ಪ್ರೇರೇಪಿಸಿತು. ಅವನು ಹಾಕಿದ ಹರಕು ಅಂಗಿಯಲ್ಲಿ ಮದಂ ಎಂದು ದೊಡ್ಡ ಅಕ್ಷರದಲ್ಲಿ ಬರೆದಿದ್ದರೆ, ಅದರ ಕೆಳಗೆ 'ಜೋ ಮರ್ದ್ ಹೋತಾ ಹೈ ಉಸ್ಕೋ ದರ್ದ್ ನಹೀ ಹೋತ ಹೈ' ಎಂದಿತ್ತು. ಅವನು ನನಗೆ ಕಟ್ಟಾ ಅಮಿತಾಬ್ ಅಭಿಮಾನಿಯಂತೆ ಕಂಡು ಬಂದ. ಹೆಚ್ಚಿನ ಪ್ರಯಾಣಿಕರಿಲ್ಲದ ಕಾರಣ ನನ್ನ ಪಕ್ಕದಲ್ಲಿ ಕುಳಿತು ನಿರಂತರವಾಗಿ ಅಮಿತಾಭ್ ಹಾಡುಗಳನ್ನು ಹಾಡುತ್ತಿದ್ದ. ನನ್ನನ್ನು ನೋಡಿದ ಕೂಡಲೇ ಹತ್ತು ರೂಪಾಯಿಗೆ ಎರಡು ರೂಪಾಯಿ ಕಡಿಮೆ ಇದೆ. ಎರಡು ರೂಪಾಯಿ ಕೊಡಿ ಎಂದ. ಅಮಿತಾಭ್‌ರ ಹಾಡು ಕೇಳುತ್ತಿದ್ದ ನಾನು ಮಂತ್ರ ಮುಗ್ದನಂತೆ ಎರಡು ರೂ. ಕೊಟ್ಟೆ.

ನನ್ನ ಎದುರು ಬದಿಯಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬರು ಅವನಲ್ಲಿ 10 ರೂ. ಯಾಕಾಗಿ ಬೇಕಿತ್ತು? ಎಂದು ಪ್ರಶ್ನಿಸಿದರು. ಊಟ ಮಾಡಲಿಕ್ಕಿದೆಯೇನೋ ಎಂದೆನಿಸದ ನನಗೆ ಅವನ ಉತ್ತರವನ್ನು ಕೇಳಿ ದಂಗು ಬಡಿದಂತಾಯಿತು. ಗಾಂಜಾ ಸೇವಿಸಲು, ಇಲ್ಲೇ ಪಕ್ಕದಲ್ಲಿ ಗಾಂಜ ಸಿಗುತ್ತದೆ..." ಎಂದು ಮುಗ್ದನಂತೆ ನುಡಿದು ರೈಲಿನಿಂದ ಕೆಳಗಿಳಿದು ಕತ್ತಲೆಯಲ್ಲಿ ಮರೆಯಾದ. ಅವನ ಉತ್ತರ ಕೇಳಿದ ನನ್ನ ಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳು ಎದುರಾದವು.

ಭಿಕ್ಷುಕರಿಗೆ ಸಿಗುವಂತಹ ಮಾದಕ ದ್ರವ್ಯಗಳು ಪೊಲೀಸರಿಗೇಕೆ ಸಿಗುವುದಿಲ್ಲ? ಅಥವಾ ಕಣ್ಣಿದ್ದು ಕುರಡರಂತೆ ವರ್ತಿಸುತ್ತಿದೆಯೇ ನಮ್ಮ ಕಾನೂನು ಸುವ್ಯವಸ್ಥೆ? ಸುರಕ್ಷಾ ಬೇಲಿಯನ್ನು ದಾಟಿ ಸಾಮಾನ್ಯ ಜನರ, ದೇಶದ ಭವಿಷ್ಯದ ಬೆನ್ನೆಲುಬುಗಳಾದ ವಿದ್ಯಾರ್ಥಿಗಳ ಕೈಗೆಟಕುವ ಈ ಸ್ಲೋ ಪಾಯಿಸನ್ ಮಾರಾಟದ ದಂಧೆಗಳು ಲೀಲಾಜಾಲವಾಗಿ ನಗರದಾದ್ಯಂತ ಹರಡಿದರೂ ಕಾನೂನನ್ನು ಕಾಪಾಡುವ ಅಧಿಕಾರಿಗಳೇಕೆ ಸುಮ್ಮನಿದ್ದಾರೆ? ಇತ್ಯಾದಿ ಪ್ರಶ್ನೆಗಳ ಸುರಿಮಳೆಗಳೇ ನನ್ನನ್ನು ಪೀಡಿಸುತ್ತಿದ್ದವು. ಒಟ್ಟಿನಲ್ಲಿ ಇಲ್ಲಿ ಕಾಣದ ಕೈಗಳ ಕರಾಮತ್ತು ಸ್ಪಷ್ಟವಾಗಿ ಗೋಚರಿಸುತ್ತಿದ್ದುದಂತೂ ಅಕ್ಷರಶಃ ನಿಜ.

ಹಲವು ವರ್ಷಗಳ ಹಿಂದೆ ಗೋವಾದಲ್ಲಿ ನಡೆದ ಹದಿಹರೆಯದ ವಿದೇಶಿ ಮಾದಕ ವ್ಯಸನಿ ಹುಡುಗಿಯ ಮೇಲೆ ಅತ್ಯಾಚಾರ ಮತ್ತು ಕೊಲೆ, ಮುಂಬಯಿಯಲ್ಲಿ ನಡೆದ ಮಾದಕ ವ್ಯಸನಿಗಳ ತ್ರಿಕೋನ ಪ್ರೇಮ ಕತೆಯ ದುಃಖಾಂತ್ಯ, ದಿಲ್ಲಿಯ ದಿಲ್ಲನ್ನೇ ಕಲಕಿದ ದೇಶದ ಹೆಮ್ಮೆಯ ಪುತ್ರಿ ನಿರ್ಭಯ ಕೊಲೆಯ ಆರೋಪಿಗಳು, ಮೊನ್ನೆ ಮೊನ್ನೆ ನಡೆದ ನಗರದ ಶಕ್ತಿಮಿಲ್ ಅತ್ಯಾಚಾರ ಪ್ರಕರಣದಲ್ಲಿ ಭಾಗಿಯಾಗಿರುವ ಮಾದಕ ವ್ಯಸನಿ ಆರೋಪಿಗಳು. ಈ ಎಲ್ಲಾ ಪ್ರಕರಣಗಳಲ್ಲಿ ಸಾಮಾನ್ಯವಾಗಿ ಕುಂಡು ಬರುವ ಪ್ರಮುಖ ಅಂಶವೇ ಮನಸ್ಸು ಮತ್ತು ದೇಹವನ್ನು ಉದ್ರೇಕಿಸುವ ನಶೀಲಿ ಪದಾರ್ಥಗಳು.



✍ ತಾಳಿಪಾಡಿ ರವೀಂದ್ರ

ಹೆರಾಯಿನ್, ಕೊಕೇನ್, ಮೆಥಂಪೆಟಮೈನ್, ಕಾಕ್ ಕೊಕೇನ್, ಓಪಿಯಂ, ಮರಿಜುವಾನ, ಕೆಟಮಿನಂ, ಬ್ರೌನ್ ಶುಗರ್, ಆಂಪಿಟಮಿನ್, ಮಾರ್ಫಿನ್ ಮುಂತಾದ ಮಾದಕ ವಸ್ತುಗಳಲ್ಲಿ ಕೆಲವು ಕೈಗೆಟಕುವ ಬೆಲೆಯಲ್ಲಿ ಸಿಕ್ಕರೆ ಕೆಲವೊಂದು ಶ್ರೀಮಂತರಿಗಷ್ಟೇ ಸೀಮಿತ. ನಮ್ಮ ಮೆದುಳಿನ ಸಾಮಾನ್ಯ ಸಂಪರ್ಕ ಸಾಧಕ ತಂತಿಯನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಮನಬಂದಂತೆ ಮೀಟುವುದರ ಮೂಲಕ ಬುದ್ಧಿ ಮತ್ತು ಮನಸ್ಸಿನ ಕೆಟ್ಟ ಪರಿಣಾಮ ಬೀರುವ ನಶೆ ಪದಾರ್ಥಗಳು ಮನುಷ್ಯನನ್ನು ಸಮಾಜದ ಘಾತಕ ಕೆಲಸಗಳಿಗೆ ಪ್ರೇರೇಪಿಸುತ್ತದೆ. ಇದರ ಬಲೆಗೆ ಒಮ್ಮೆ ಸಿಕ್ಕ ಮನುಷ್ಯ ನರಮಂಡಲದ ಅಸಮರ್ಪಕ ಕಾರ್ಯದಿಂದ ತನ್ನ ಮೇಲಿನ ಕತೋಟಿ ತಪ್ಪಿ ಉದ್ರೇಕ ಅಥವಾ ಖಿನ್ನತೆಗೆ ಒಳಗಾಗುವುದರ ಮೂಲಕ ಸಮಾಜ ಬಾಹಿರ ಕೆಲಸಕ್ಕೆ ಮುಂದಾಗುತ್ತಾನೆ.

ಮೊದಮೊದಲು ಮೋಜಿಗಾಗಿ ಆರಂಭವಾಗುವ ಈ ಚಟ ಹಿತವಾದ ಅನುಭವ ನೀಡದರೆ, ಅನಂತರ ಬುದ್ಧಿ ಮತ್ತು ಮನಸ್ಸಿನ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತದೆ. ಈ ವ್ಯಸನದ ದಾಸ್ಯಕ್ಕೆ ಬಲಿಯಾಗುವ ಯುವಜನರಲ್ಲಿ ಹೆಚ್ಚಿನವರು ಶ್ರೀಮಂತ ಕುಟುಂಬಕ್ಕೆ ಸೇರಿದವರು ಮತ್ತು ಕೆಳವರ್ಗದ ಜನರು. ಒಂಟಿತನ, ನಿರಾಸೆಗನ್ನು ಮರೆಯಲು ಪ್ರಾರಂಭವಾಗುವ ಈ ಚಟ ನಂತರ ಬಿಡಲಾರದ ತುತ್ತಾಗಿ ಜೀವಕ್ಕೆ ಕುತ್ತಾಗುತ್ತದೆ.

ಯಾವುದೇ ವ್ಯಕ್ತಿ ತನ್ನಿಂದ ತಾನಾಗೆ ಯಾವ ಚಟವನ್ನೂ ಆರಂಭಿಸುವುದಿಲ್ಲ. ಸಹವಾಸ ದೋಶ, ಒತ್ತಡ, ಖಿನ್ನತೆ, ಕುತೂಹಲ ಮತ್ತು ದಾಕ್ಷಿಣ್ಯದ ಸ್ವಭಾವವುಳ್ಳವರು ಬೇಗನೆ ಇದಕ್ಕೆ ದಾಸರಾಗಿ ಹೋಗುತ್ತಾರೆ. ಪ್ರಾರಂಭದಲ್ಲಿ ಯಾವುದೇ ರೀತಿಯ ನಶೀಲಿ ಪದಾರ್ಥಗಳು ಹಿತಕರ ಅನುಭವವನ್ನು ನೀಡಿದರೂ ಕಾಲಕ್ರಮೇಣ ಅದನ್ನು ಪಡೆಯಲು ಮನುಷ್ಯ ಕೊಲೆ, ಸುಲಿಗೆ, ಅತ್ಯಾಚಾರ, ಅನಾಚಾರಗಳನ್ನು ಮಾಡಲು ಹೇಸುವುದಿಲ್ಲ. ಕೊನೆಗೆ ಮಾನಸಿಕ ಸಮತೋಲನವನ್ನು ಕಳೆದುಕೊಂಡು ಹುಚ್ಚರಂತೆ ವರ್ತಿಸಿ ಸಾಯುವ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ.

ಮಾದಕ ವಸ್ತುಗಳ ಮೋಹಕ ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುವವರಲ್ಲಿ ಹೆಚ್ಚಿನವರು ಕಾಲೇಜು ವಿದ್ಯಾರ್ಥಿಗಳೆಂಬುದನ್ನು ಮರೆಯುವಂತಿಲ್ಲ. ಆದ್ದರಿಂದ ವಿದ್ಯಾರ್ಥಿಗಳ ಮನಸ್ಸಿನ ಹಿಡಿತ ತಪ್ಪುವುದು ಯೌವನಾವಸ್ಥೆಯಲ್ಲಿ. ಸದಾ ನಿಂತ ಕಡೆ ನಿಲ್ಲದೆ, ಚಂಚಲತೆಯಿಂದ, ಅಸ್ಪಷ್ಟವಾಗಿ ಮನಸು ಸಾಗುತ್ತಿರುತ್ತದೆ. ಹೀಗಾದಾಗಲೇ ಬಿಸಿರಕ್ತದ ಅಮಲಿನಲ್ಲಿ ಎಲ್ಲರ ಕೇಂದ್ರ ಬಿಂದು ನಾನಾಗಬೇಕು, ಕಂಡದ್ದೆಲ್ಲವೂ ನನಗೆ ಬೇಕು, ಎಲ್ಲವೂ ನನ್ನಿಂದಲೇ, ನಾನೇ ಎಲ್ಲಾ... ಎಂಬಿತ್ಯಾದಿ ರೋಷ - ಹಣ ನಾನಾ ತರದ ದುಷ್ಟ ಶಕ್ತಿಗಳು ಮನಸ್ಸನ್ನು ಪ್ರವೇಶಿಸುತ್ತದೆ. ಕಂಡ ಕನಸು ಕೈಗೂಡಲು ಯುವ ಪೀಳಿಗೆ ಅಡ್ಡದಾರಿಯನ್ನು ಹಿಡಿಯುವುದು ಕೂಡ ಯೌವನಾವಸ್ಥೆಯಲ್ಲಿಯೇ. ಈ ರೀತಿಯ ಅವಸ್ಥೆಯಲ್ಲಿ ಮನಸ್ಸನ್ನು ಲಂಗು ಲಗಾಮು ಹಾಕಿ ಬಂಧಿಸಿಟ್ಟಲ್ಲಿ ಜೀವನದಲ್ಲಿ ಅಡಿಜಾರಿ ಬೀಳುವ, ತಡವಿಕೊಂಡೇಳುವ ಪ್ರಶ್ನೆಯೇ ಬರುವುದಿಲ್ಲ. ದೇಶದ ಕೆಲವೆಡೆಗಳಲ್ಲಿ ಅನ್ನ-ನೀರಿಗೆ ಬರವಿದ್ದರೂ ಮದ್ಯಪಾನಕ್ಕೆ ಬರಗಾಲವಿಲ್ಲ.

ಮಾದಕ ವ್ಯಸನಿಗಳು ಕುಟುಂಬಕ್ಕಷ್ಟೇ ಅಲ್ಲದೆ ಸಮಾಜಕ್ಕೂ ಹೊರೆ.

ಇಂತವರನ್ನು ಗುರುತಿಸಿ ಅವರಿಗೆ ಸರಿಯಾದ ಚಿಕಿತ್ಸೆ ಕೊಡಿಸಿ ಸಮಾಜದ ಮುಖ್ಯವಾಹಿನಿಗೆ ಕರೆತರಬೇಕಾದದ್ದು ಸ್ವಸ್ಥ ಸಮಾಜದ ಕರ್ತವ್ಯವಾಗಿದೆ. ಮಾದಕ ದ್ರವ್ಯಗಳ ಭೀಕರ ಅಡ್ಡ ಪರಿಣಾಮದ ಬಗ್ಗೆ ತಿಳುವಳಿಕೆ ಕೊಡಿಸುವ ಸಾಕ್ಷ್ಯಚಿತ್ರಗಳು, ಚಟ ಬಿಡಿಸುವ ವರ್ಜನ ಶಿಬಿರಗಳು, ಬೀದಿ ನಾಟಕಗಳು ವಿವಿಧ ಸಂಘಟನೆಗಳ ಮೂಲಕ ಜನರಿಗೆ ಎಚ್ಚರಿಕೆ ನೀಡುತ್ತಿದ್ದರೂ ಸಂಪೂರ್ಣ ಜನರನ್ನು ಮುಟ್ಟಲು ಸಾಧ್ಯವಾಗುತ್ತಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳು, ಯುವಕ ಯುವತಿಯರು ಈ ಕೆಟ್ಟ ಚಟಕ್ಕೆ ಬಲಿಯಾಗುತ್ತಿರುವುದು ವಿಷಾದನೀಯ. ನಮ್ಮ ದೇಶದ ಯುವ ಜನತೆ ಎಚ್ಚೆತ್ತುಕೊಂಡರೆ ಮಾದಕ ವ್ಯಸನವೆಂಬ ಹೆಮ್ಮರವನ್ನು ಸರಕಾರ ನಿದ್ದೆಯಿಂದ ಎಚ್ಚೆತ್ತುಕೊಳ್ಳುವ ಮೊದಲು ಬುಡಸಮೇತ ಕೆಳಗುರುಳಿಸಲು ಹೆಚ್ಚು ಸಮಯ ಬೇಕಾಗಿಲ್ಲ. ಒಟ್ಟಿನಲ್ಲಿ ಮನಸ್ಸೆಂಬ ಮರ್ಕಟವನ್ನು ಬುದ್ಧಿಯೆಂಬ ಕಡಿವಾಣದಿಂದ ಹತೋಟಿಯಲ್ಲಿಟ್ಟುಕೊಂಡರೆ ನಾವು ಸಾಧನೆಯ ಹರಿಕಾರರಾಗುತ್ತೇವೆ.

---

# ಏನು ತಪ್ಪು?

ರಾತ್ರಿಯ ಸುಂದರ ಚಂದಿರ
ಅತ್ತಿತ್ತ ಸುತ್ತುವಾಗ ನಿರಂತರ . . . .
ನಾನೂ ಸ್ವಲ್ಪ ಅಲೆದಾಡಿದರೆ
ಏನು ತಪ್ಪು?

ಜಗತ್ತು ರೋಧಿಸುತಿದೆ
ದಿನನಿತ್ಯ ಮೌನವಾಗಿ . . . .
ನಡುವೆ ನಾ ಸ್ವಲ್ಪ ನಕ್ಕರೆ
ಏನು ತಪ್ಪು?

ಜೀವರಾಶಿ ಹಂಬಲಿಸುತಿದೆ
ಪ್ರೀತಿಗಾಗಿ ಅನವರತ . . .
ನಾನೂ ಸ್ವಲ್ಪ ಪ್ರೇಮಭಿಕ್ಷೆ ಬೇಡಿದರೆ
ಏನು ತಪ್ಪು?

ಬೆಳಕಿನ ಆಸೆ ಇದ್ದದ್ದೇ
ಎಲ್ಲರಿಗೂ ಎಂದೆಂದೂ. . .
ನಾ ಸ್ವಲ್ಪ ಅಂಧಕಾರ ಅರಸಿದರೆ
ಏನು ತಪ್ಪು?

ಬದುಕ ಬಯಲಲಿ ಸ್ವಪ್ನಗಳು
ಅರಳಿ ಸುಗಂಧ ಸೂಸುತಿರಲು . . .
ನಾನೂ ಸ್ವಲ್ಪ ಕನಸು ಕಂಡರೆ
ಏನು ತಪ್ಪು?

ಪ್ರತಿಯೊಬ್ಬನೂ ಸಂತೋಷ ಕೂಟದಲಿ
ಮೈ ಮರೆತು ವಿಹರಿಸುತಿರಲು. . . .
ನಾ ಸ್ವಲ್ಪ ಕನಸು ಕಂಡರೆ
ಏನು ತಪ್ಪು?

ಪ್ರತಿಯೊಬ್ಬನೂ ಸಂತೋಷ ಕೂಟದಲಿ
ಮೈ ಮರೆತು ವಿಹರಿಸುತಿರಲು. . .
ನಾ ಸ್ವಲ್ಪ ಏಕಾಂತ ಬಯಸಿದರೆ
ಏನು ತಪ್ಪು?



– ಶಾರದಾ ಎ. ಅಂಚನ್

# ನನ್ನ ಗ್ರಹಿಕೆಯಂತೆ ಉಭಯ ರಾಗ

"ನಾನು ಬಡವಿ
ಆತ ಬಡವ
ಒಂದೆ ನಮ್ಮ ಬದುಕು
ಬಳಸಿಕೊಂಡೆವು ಅದನ ನಾವು
ಅದಕು ಇದಕು ಎದಕು"

ಮಾತನ್ನೇ ಹಾಡಾಗಿಸಿದ ವರಕವಿ ಬೇಂದ್ರೆಯವರು ಶಬ್ದಗಳ ಜೊತೆ ಆಟವಾಡಿದ್ದನ್ನು ನೆನಪಿಸುತ್ತದೆ ನೇಸರುವಿನಲ್ಲಿ ಮೂಡಿಬಂದ ಮನೋಹರ ನಾಯಕ್ ಅವರ 'ಉಭಯ ರಾಗ' ದಲ್ಲಿ. ಎರಡು ಜೀವಿಗಳ ಬೆಸೆದ ಕೊಂಡಿ, ಪರಸ್ಪರ ಹೋಲಿಕೆ ಗಂಭೀರ ವಿಷಯಗಳನ್ನು ಸೂಕ್ಷ್ಮಾತಿಸೂಕ್ಷ್ಮ ಶಬ್ದಗಳ ಬೆಳಕಿಂಡಿಯಲ್ಲಿ ಕಿರಣಗಳನ್ನು ಹೊರಸೂಸಿದ್ದಾರೆ. ಅವರ ಶಬ್ದಗಳ ಮೋಡಿ 'Ring Master' ತರಹ, ಪ್ರತಿಯೊಂದಕ್ಕೆ ಅರ್ಥ ಸಮಅರ್ಥ ಮೂಡಿಸಿದ್ದಾರೆ.

ಸರಸ ಜನನ
ವಿರಸ ಮರಣ
ಸಮರಸವೇ ಜೀವನ"

ಎನ್ನುವುದಕ್ಕೆ ಅವರ ಕವನದ ಪ್ರತಿಯೊಂದು ಸಾಲಿನ ಶಬ್ದಗಳ ಜೋಡಮೇ ಓದುಗರನ್ನು ಮತ್ತೆ ಮತ್ತೆ ಓದುವಂತೆ ಪ್ರೇರೇಪಿಸುತ್ತದೆ. ಶಬ್ದಗಳು ಮನಮೋಹಕವಾಗಿದೆ.

ಶಬ್ದಮಣಿ ದರ್ಪಣ (ಕೇಶಿರಾಜನ ವ್ಯಾಕರಣ) ಗ್ರಂಥದಲ್ಲಿ ಕೇಶಿರಾಜ ಹೇಳುವಂತೆ ವಾಗ್ದೇವಿಯ ಶಬ್ದ ಭಂಡಾರವನ್ನು ಸೂರೆ ಮಾಡಿದಂತೆ ಇವರ ಶಬ್ದ

✍ ಲಲಿತಾ ಪಿ. ಅಂಗಡಿ 97687574298

ರಚನಾ ಶೈಲಿ. ಕೇವಲ ಜೋಡಣೆಗಾಗಿ ಜೋಡಣೆಯಲ್ಲ, ಆ ಶಬ್ದಗಳ ಜೋಡಿಸುವಿಕೆಯಲ್ಲಿ ವಾಚ್ಯಾರ್ಥ ಇದೆ. ಲಕ್ಷ್ಯಾರ್ಥ ಇದೆ. ಹೀಗೆ ಅರ್ಥವಂತಿಕೆಯಿಂದ ಎರಡು ಜೀವಿಗಳ ಸಂಗಮ, ಸಮಾಗಮ, ಸುಮಧುರ, ಸೌಹಾರ್ದ, ಸದ್ಭಾವನೆಯ, ಸೌಜನ್ಯಪೂರ್ಣ, ಸೃಜನಾತ್ಮಕವಾದ, ಸದೃಢವಾದ, ಸಮತೆಯ, ಸುಶೀಲತೆಯ, ಸುಕೋಮಲ ಭಾವದ ಹೊಂದಾಣಿಕೆಯು 'ಉಭಯ ರಾಗ'ದಲ್ಲಿದೆ.

ಮನದಾಳದ ಅಂತರಾಳದ ಪಕಳೆಗಳು, ಸಂಸಾರದ ಸಾರಥ್ಯದಲ್ಲಿ, ಎರಡು ಗಾಲಿಗಳಂತೆ (ಜೀವನ ರಥದ) ಹೇಗೆ ಪ್ರಮುಖವಾಗಿ ಸಮವಾಗಿ ಎಲ್ಲವನ್ನೂ ಸ್ವೀಕರಿಸುವ, ಎದುರಿಸುವ, ಹೊಂದಾಣಿಕೆಯನ್ನು ಚೆನ್ನಾಗಿ ನೆಯ್ದಿದ್ದಾರೆ

**ವಿರುದ್ಧಾರ್ಥದ ನಡುವೆಯೂ ಸ್ತ್ರೀಲಿಂಗ, ಪುಲ್ಲಿಂಗ**

"ಅವಳು ಇಳೆಯೊಳೆದ ತಾಯಿ ಬೇರು
ನಾನು ಆ ಗಗನ ಚುಂಬಿ ಮೇರು
ನನ್ನದು ಅರಿಯದೇ ಮುನ್ನಚ್ಚೆ
ಅವಳದು ಅರಿತು ಅರಿತೂ ಹಿನ್ನೆಚ್ಚೆ
ಅವಳು ಉತ್ತರ ಧ್ರುವ
ನಾನು ದಕ್ಷಿಣ ಧ್ರುವ
ಅವಳು ಉಶೆ, ನಾನು ನಿಶೆ"

ಏಕಾರ್ಥ ಭಾವನೆಯ ನಡುವೆ....

"ಅವಳು ಸಮರಸ, ನಾನು ನವರಸ
ನಾನು ತತ್ವ, ಅವಳು ಸತ್ವ
ನಾನು ನಿ ಬಂಧ, ಅವಳು ಅನುಬಂಧ
ಅವಳು ನದಿ, ನಾನು ಜಲಪಾತ"

ಜೋಡಿಯ ಸಮಬಾಳು, ಸಾರ್ಥಕ ರೀತಿಯ ಬದುಕುವಿಕೆಯ ಒಂದು ಚಿತ್ರಣವನ್ನು ಶಬ್ದಗಳ ಒಳಾರ್ಥದ ಮುಖಾಂತರ ರೂಪಕೊಟ್ಟ ಅಲಂಕಾರಿಕವಾಗಿ, ಆಕರ್ಷಕ ರೀತಿಯಲ್ಲಿ ಓದಿಸಿಕೊಳ್ಳುತ್ತದೆ ಓದುಗರನ್ನು. ಒಲುಮೆ, ಚಿಲುಮೆ, ನಲುಮೆ, ಸುಖದುಃಖ, ಕತ್ತಲು, ಬೆಳಕು, ಸಿಹಿಕಹಿಗಳ ಈ ಸಮಾನ ಸ್ವೀಕರಿಕೆಯಿ ಸಮಾಗಮದ ಸ್ವಾರಸ್ಯಪೂರ್ಣ ಬದುಕು ಎನ್ನುವುದನ್ನೂ ಸಹ ಸಮನಾರ್ಥ ಭಾವನೆಯ ಒಂದಾಗಿ ಬಾಳುವಿಕೆಯ ಚಿತ್ರಣವನ್ನು ಮನ ತಟ್ಟುವಂತೆ ಅರ್ಥೈಸಿದ್ದಾರೆ.

ಪರಸ್ಪರ ರೋಧವಿಲ್ಲ, ವಿರೋಧಲ್ಲ, ನಿರೋಧವಿಲ್ಲ, ಪ್ರತಿರೋಧವಿಲ್ಲ. ಒಂದಾಗಿ ಬಾಳುವುದಕ್ಕೆ ಒಂದು ತರಹ Compromise ಸಂಸಾರದಲ್ಲಿ ಅಗತ್ಯ ಅನ್ನುವುದನ್ನು ಅವರ ಕವನದಲ್ಲಿ ನಾನು ಕಂಡುಕೊಂಡಿದ್ದೇನೆ. ತದನಂತರವೇ ಜೀವನವು ಸುಖಸಾಗರದ ಗೃಹಸ್ಥಾಶ್ರಮದ ಭದ್ರ ಬುನಾದಿ ಅನ್ನುವ ತಾತ್ಪರ್ಯ ಅರ್ಥವಂತಿಕೆಯಿಂದ ಕೂಡಿದೆ.

# ತತ್ವ ಸತ್ವ ಮಹತ್ವಗಳ ಸಂಗಮ : ಅನುಭಾವ ಸಾಹಿತ್ಯದ ವಿಭಿನ್ನ ನೆಲೆಗಳು

ಭಾರತೀಯ ಭಕ್ತಿ ಸಾಹಿತ್ಯದ ಪ್ರಮುಖ ಗುರಿಯೆಂದರೆ ಆಧ್ಯಾತ್ಮಿಕ ಅನ್ವೇಷಣೆ ಹಾಗೂ ಸಾಮಾಜಿಕ ವಿಶ್ಲೇಷಣೆ. ಆದ್ದರಿಂದ ಭಕ್ತಿಸಾಹಿತ್ಯಗಳ ಭಾಷೆ ಬೇರೆಯಾದರೂ ಭಾವ, ಅನುಭಾವ ಒಂದೇ. ಅನುಭಾವದ ಕುರಿತು ವಿವರಿಸುವಾಗ ದಾರ್ಶನಿಕರಾದ ಕಾನಡೆಯವರು ಕೆಲವೊಂದು ಲಕ್ಷಣಗಳನ್ನು ಮಂಡಿಸುತ್ತಾರೆ. ಅವುಗಳೆಂದರೆ, ಸಾರ್ವತ್ರಿಕತೆ, ವಾಸ್ತವಿಕತೆ, ಅನಿವಾರ್ಯತೆ ಹಾಗೂ ಸಪ್ರಮಾಣತೆ. ಈ ಎಲ್ಲ ವೈಚಾರಿಕ ಲಕ್ಷಣಗಳ ಸಾದೃಶ್ಯತೆಯನ್ನು ವಿಭಿನ್ನವಾದ ದೃಷ್ಟಿಕೋನದಲ್ಲಿ ಪರಿಚಯಿಸಿಕೊಡುವ ಕೃತಿ ಡಾ. ಜಿ.ಎನ್. ಉಪಾಧ್ಯ ಅವರ "ಅನುಭಾವ ಸಾಹಿತ್ಯದ ವಿಭಿನ್ನ ನೆಲೆಗಳು".

ಕನ್ನಡದ ದಾಸ ಸಾಹಿತ್ಯ, ಶರಣಸಾಹಿತ್ಯ ಹಾಗೂ ಮರಾಠಿಯ ಸಂತ ಸಾಹಿತ್ಯ ಹಿನ್ನೆಲೆಯಲ್ಲಿ ಮೂಡಿರುವ ಇಲ್ಲಿಯ ಲೇಖನಗಳು ಹೊಸ ವಿಚಾರಗಳತ್ತ ಬೆಳಕನ್ನು ಹರಿಸಿವೆ. ಕರ್ನಾಟಕದ ವಚನ ಚಳುವಳಿಯನ್ನು ಭಾರತೀಯ ಭಕ್ತಿ ಪರಂಪರೆಯ ಭಿನ್ನ ಧ್ವನಿಯೆಂದು ಕರೆದಿರುವ ಲೇಖಕರು, ವಚನ ಸಾಹಿತ್ಯದ ವೈಶಿಷ್ಟ್ಯತೆಯನ್ನು ನಾಲ್ಕು ಅಧ್ಯಾಯಗಳಲ್ಲಿ ವಿವರಿಸಿದ್ದಾನೆ. ಇಪ್ಪತ್ತೊಂದನೆಯ ಶತಮಾನದ ವೈಜ್ಞಾನಿಕ ಯುಗದಲ್ಲಿ ವಚನ ಸಾಹಿತ್ಯ ಓದುವ ಅವಶ್ಯಕತೆ ಇದೆಯೇ? ಎಂಬ ಪ್ರಶ್ನೆಗೆ ಮೂವತ್ತು ಅಂಶಗಳನ್ನು ಮಂಡಿಸಿ ಸಮರ್ಪಕವಾದ ಉತ್ತರವನ್ನು ನೀಡುತ್ತಾರೆ.

'ವಚನಕಾರರ ಕಾವ್ಯ ಕಾರಣ' ವಿಚಾರವನ್ನು ಎತ್ತಿಕೊಂಡು ವಚನ ಸಾಹಿತ್ಯದ ಸಾಹಿತ್ಯಿಕ ಪ್ರೇರಣ, ಪರಿಕರಗಳನ್ನು ವಚನಗಳ ಮುಖಾಂತರ ಉದಾಹರಿಸಿದ್ದಾರೆ. ವಚನ ಸಾಹಿತ್ಯವು ಭಾರತದ ಬೇರೆ ಭಕ್ತಿ ಸಾಹಿತ್ಯಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಸೋದಾಹರಣವಾಗಿ ಸ್ಪಷ್ಟಪಡಿಸುತ್ತಾರೆ.

ಪ್ರಾಚೀನ ಕರ್ನಾಟಕದ ಹಲವಾರು ಪ್ರದೇಶಗಳು ಇಂದು ಮಹಾರಾಷ್ಟ್ರ ರಾಜ್ಯದಲ್ಲಿವೆ. ಅದರಲ್ಲಿ ಸೋಲ್ಲಾಪುರ ಜಿಲ್ಲೆಯ ಮಂಗಳವಾಡ ಅಥವಾ ಮಂಗಳಿವೇಡವು ಒಂದು. ಶೈವ-ವೀರಶೈವರ ಕಾರ್ಯಕ್ಷೇತ್ರವಾಗಿದ್ದ ಮಂಗಳಿವೇಡವು ಇತಿಹಾಸದ ಪುಟಗಳಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದೆ. 'ಶರಣಕ್ರಾಂತಿಗೆ ನಾಂದಿ ಹಾಡಿದ ಮಂಗಳವಾಡು' ಎಂಬ ಲೇಖನದಲ್ಲಿ ವೀರಶೈವ ಕಾಲದಲ್ಲಿಯ ಮಂಗಳಿವೇಡದ ಚಿತ್ರಣವಿದ್ದು, ಅದರ ಐತಿಹಾಸಿಕ ಹಾಗೂ ಚಾರಿತ್ರಿಕ ಅಂಶಗಳನ್ನು ದಾಖಲಿಸಿದ್ದಾರೆ. ಮರಾಠಿ ಭಕ್ತಿ ಸಾಹಿತ್ಯದಲ್ಲಿಯೂ ಮಂಗಳಿವೇಡಕ್ಕೆ ಅತ್ಯುನ್ನತ ಸ್ಥಾನವಿದೆ. ಮಹಾರಾಷ್ಟ್ರದ ಪ್ರಸಿದ್ಧ ಸಂತರಾದ ಚೋಖಾಮೇಳಾರ ಕರ್ಮಭೂಮಿ ಇದಾಗಿದ್ದು, ಅವರ ಸಮಾಧಿ ಸ್ಥಳವು ಇಲ್ಲಿದೆ ಎಂಬುದು ಇಲ್ಲಿ ಉಲ್ಲೇಖನೀಯ.

ಡಾ. ಜಿ.ಎನ್. ಉಪಾಧ್ಯ ಅವರಿಗೆ ಶಾಸನಗಳ ಅಧ್ಯಯನ ಆಸಕ್ತಿಯ ಕ್ಷೇತ್ರ. ಮಹಾರಾಷ್ಟ್ರದಲ್ಲಿಯ ಕನ್ನಡ ಶಾಸನಗಳ ಅಧ್ಯಯನವನ್ನು ಕೈಗೊಂಡ ಉಪಾಧ್ಯ ಅವರು ಅದರ ಹಿನ್ನೆಲೆಯಲ್ಲಿ ಶಿವಯೋಗಿಯಾಗಿ, ಸಮಾಜಮುಖಿಯಾಗಿ ಸೇವೆ ಸಲ್ಲಸಿದ ಸಿದ್ಧರಾಮನ ವ್ಯಕ್ತಿತ್ವದ ಸಂಪೂರ್ಣ ವಿವರಣೆಯನ್ನು ಈ ಕೃತಿಯಲ್ಲಿ ನೀಡಿದ್ದಾರೆ. 'ಕನ್ನಡದಲ್ಲಿ ಸಿದ್ಧರಾಮ ಸಾಹಿತ್ಯ' ಎಂಬ ಅಧ್ಯಾಯದಲ್ಲಿ ಸಿದ್ಧರಾಮ ಸಾಹಿತ್ಯವನ್ನು ನಾಲ್ಕು ನೆಲೆಯಲ್ಲಿ ಗುರುತಿಸಿ ವಿಂಗಡಿಸಿದ್ದಾರೆ. ಸಿದ್ಧರಾಮನ ವಚನಗಳ ಹೊರತಾಗಿ ಬೇರೆ ಯಾವುದೇ ವಚನಕಾರರ ವಚನಗಳು ಶಾಸನಗಳಲ್ಲಿ ಇಲ್ಲ ಎಂಬುದು ಗಮನಾರ್ಹ ಸಂಗತಿ.

ಶರಣ ಸಾಹಿತ್ಯದಂತೆ ಹರಿದಾಸ ಸಾಹಿತ್ಯವು ಮಾನವೀಯ ಮೌಲ್ಯಗಳ ಮಹಾಪೂರ. ಲೇಖಕರೇ ಹೇಳುವಂತೆ "ಕನ್ನಡ ವಾಙ್ಮಯದಲ್ಲಿ ದಾಸ ಸಾಹಿತ್ಯ ಒಂದು ಪ್ರಮುಖವಾದ ಘಟ್ಟ. ಸಂಗೀತ, ಸಾಹಿತ್ಯ, ನೃತ್ಯ ಹಾಗೂ ಸಿದ್ಧಾಂತಗಳನ್ನು ಒಳಗೊಂಡ ಚತುರ್ಮುಖವಾದ ಈ ಸಾಹಿತ್ಯ ಪ್ರಕಾರ ಕನ್ನಡ ನಾಡಿನ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಇಂದಿಗೂ ಜನಮನ್ನಣೆಯನ್ನು ಉಳಿಸಿಕೊಂಡು ಬಂದಿರುವುದು ಉಲ್ಲೇಖನೀಯ ಅಂಶ". ದಾಸಕೂಟ ಹಾಗೂ ವ್ಯಾಸಕೂಟವನ್ನು ನಿರ್ಮಿಸಿ ದಾಸಪಂರಪರೆಯ ಸಂರಕ್ಷಣೆಗೆ ಕಾರಣೀಭೂತರಾದವರು ವ್ಯಾಸರಾಯರು. ಇವರು ವಿಜಯನಗರದ ಅರಸನಾಗಿದ್ದ ಕೃಷ್ಣದೇವರಾಯನಿಗೆ ಮಾರ್ಗದರ್ಶಕರಾಗಿ ದುಡಿದುದಲ್ಲದೆ ದಾಸಸಾಹಿತ್ಯಕ್ಕೂ ರಾಜಾಶ್ರಯ ದೊರಕಿಸಿ ಕೊಡುವಲ್ಲಿ ಯಶಸ್ವಿಯಾದರು. ವ್ಯಾಸರಾಯರನ್ನು ಕುರಿತು ಬರೆದ ಲೇಖನಕ್ಕೆ, 'ದಾಸಸಾಹಿತ್ಯಕ್ಕೆ ಕಾಯಕಲ್ಪ ನೀಡಿದ ವ್ಯಾಸರಾಯರು' ಎಂದು ನೀಡಿದ ಶೀರ್ಷಿಕೆಯಲ್ಲಿ ಉತ್ಪ್ರೇಕ್ಷೆ ಇಲ್ಲ. ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳು ಗಡಿ ವಿವಾದದಲ್ಲಿ ಸಿಲುಕಿ ಶತಮಾನಗಳ ಬಾಂಧವ್ಯವನ್ನು ಇನ್ನೂ ಜೀವಂತವಾಗಿಡುವಲ್ಲಿ ಸಹಕಾರಿಯಾಗಿವೆ. 'ಮರಾಠಿ ಸಂತ ಕವಿಗಳ ಕನ್ನಡ ಪ್ರೇಮ' ಈ ಪುಸ್ತಕದಲ್ಲಿಯ ವಿಶಿಷ್ಟ ಲೇಖನ. ಮರಾಠಿಯ ವಾರಕರಿ ಸಂತರು ಮರಾಠಿಯ ಜೊತೆಗೆ ಕನ್ನಡದಲ್ಲಿ ಅಭಂಗಗಳನ್ನು ರಚಿಸಿ ಕನ್ನಡದ ಪ್ರತಿ ಪ್ರೇಮಾದರಗಳನ್ನು ವ್ಯಕ್ತಪಡಿಸಿದ್ದಾರೆ. ಕುಮಾರವ್ಯಾಸನ ಕಾವ್ಯವವನ್ನು ಮರಾಠಿ ಕವಿ ಚಂದ್ರಾತ್ಮಜರುದ್ರನು ಅನುವಾದಿಸಿದದಲು ಅಲ್ಲದೇ ಕನ್ನಡ ಹರಿದಾಸರಾದ ಕಾಖಂಡಕಿ ಮಹಿಪತಿರಾಯರು ಮರಾಠಿಯಲ್ಲಿ ಕಾವ್ಯವನ್ನು ರಚಿಸಿ ಕನ್ನಡ ಮರಾಠಿ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸಿದ್ದಾರೆಂಬುದನ್ನು ಲೇಖಕರು ವಿವರಿಸಿದ್ದಾರೆ. ಮರಾಠಿ ದೊರೆ ಶಿವಾಜಿಗೆ ಗುರುಗಳಾಗಿ ಸಮಕಾಲೀನ ಸಮಾಜದ ಸ್ಥಿತಿ-ಗತಿಯ್ನು ಅನುಭಾವದ ಮೂಲಕ ಸುಧಾರಿಸಲು ಪ್ರಯತ್ನಿಸಿದವರು ಸಮರ್ಥ ರಾಮದಾಸರು. ರಾಮದಾಸರು ರಚಿಸಿದ ಪ್ರಾಸಾದಿಕ ಗ್ರಂಥಗಳು ಕನ್ನಡ ಮರಾಠಿ ಜನಮಾನಸದಲ್ಲಿ ಇಂದಿಗೂ ತಮ್ಮ ಪ್ರಭಾವ ಬೀರುತ್ತಲೇ ಇವೆ. ಇವುಗಳಲ್ಲದೇ ಕನಕದಾಸರ ಸಮಾಜಮುಖಿ ಚಿಂತನೆ, ಹೆಳವನಕಟ್ಟೆ ಗಿರಿಯಮ್ಮನ ಒಂದು ಹಾಡಿನ ಕುರಿತಿಷ್ಟು, ಅನುಭಾವದ ಅವಧೂತ ಷರೀಫ, ಮುಂತಾದ ವ್ಯಕ್ತಿಚಿಂತನೆಗಳು ಈ ಕೃತಿಯಲ್ಲಿವೆ. ಡಾ. ದಿವಾಣಜಿ ಅವರ 'ಪ್ರಸಾದ ಯೋಗದ ಸೊಗಸು' ಹಾಗೂ 'ಧರ್ಮಸ್ಥಳ : ಬಹುಮುಖೀ ಅಧ್ಯಯನ' ಹೀಗೆ ಎರಡು ಸಂಶೋಧನ ಪ್ರಬಂಧಗಳ ಪರಿಚಯಾತ್ಮಕ ವಿಮರ್ಶೆಗಳು ಈ ಪುಸ್ತಕದಲ್ಲಿವೆ. ವಿಷಯಗಳನ್ನು ಸರಳವಾಗಿ ಮಂಡಿಸುವದರ ಜೊತೆಗೆ ಪಂಡಿತೋತ್ತಮರ ನುಡಿಗಳನ್ನು ಉಲ್ಲೇಖಿಸಿ ಪೂರಕ ಮಾಹಿತಿಯನ್ನು ನೀಡುವುದು ಡಾ. ಜಿ.ಎನ್. ಉಪಾಧ್ಯ ಅವರ ಬರವಣಿಗೆಯ ವಿಶೇಷತೆ.

ಕನ್ನಡ ಹಾಗೂ ಮರಾಠಿ ನೆರೆಹೊರೆಯ ರಾಜ್ಯಗಳನ್ನು ಸಾಹಿತ್ಯಿಕವಾಗಿ ಬೆಸೆಯುವಲ್ಲಿ ಡಾ. ಉಪಾಧ್ಯ ಅವರು ಹಲವಾರು ಸಂಶೋಧನಾ ಗ್ರಂಥಗಳನ್ನು ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ನೀಡಿದ್ದಾರೆ. ಯುವಪೀಳಿಗೆಯಿಂದ ಹಿಡಿದು ವಯೋವೃದ್ಧ ಸಂಶೋಧಕರನ್ನು, ಲೇಖಕರನ್ನು ಹುರಿದುಂಬಿಸಿ ಮುಂಬಯಿ ಕನ್ನಡ ಲೋಕದಲ್ಲಿ ಪ್ರತಿಭಾವಂತ ಸಾಹಿತ್ಯ-ಸಂಸ್ಕೃತಿ ಪಡೆಯನ್ನು ಸನ್ನದ್ಧಗೊಳಿಸುವಲ್ಲಿ ಇಂದು ಕಾರ್ಯತತ್ಪರರಾಗಿದ್ದಾರೆ.

ಈ ಹೊತ್ತಿಗೆಯು ಜ್ಞಾನಾಸಕ್ತರಿಗೂ ಹಾಗೂ ಸಾಹಿತ್ಯ ವಿದ್ಯಾರ್ಥಿಗಳಿಗೂ ಸಮಾನವಾಗಿ ಉಪಯೋಗವಾಗಿದೆ. ಇತ್ತೀಚೆಗಷ್ಟೇ ಈ ಕೃತಿಗೆ ಪ್ರಶಸ್ತಿಯ ಗರಿಯು ಲಭಿಸಿದೆ. ಡಾ. ಜಿ.ಎನ್. ಉಪಾಧ್ಯ ಅವರು ಅಭಿನಂದನಾರ್ಹರು. ಅವರಿಂದ ಸಾಹಿತ್ಯಿಕ ಸೇವೆಯು ನಿರಂತರವಾಗಿ ನಡೆಯಲಿ ಎಂಬುದೇ ಉಪಾಧ್ಯ ಅವರ ಸಾಹಿತ್ಯಾಭಿಮಾನಿಗಳ ಆಶಯ.

**- ಚಂದ್ರಮುತಾಲಿಕ, ಮುಂಬಯಿ ವಿ.ವಿ.**

# ಡಾ. ಬಿ. ಎ. ವಿವೇಕ ರೈ ಅವರೊಂದಿಗೆ ಸಂದರ್ಶನ

ಅಂದು ಜನವರಿ 25 ಶನಿವಾರ. ಆ ದಿನ ಮೈಸೂರು ಅಸೋಸಿಯೇಷನ್ ಮುಂಬಯಿ ಮತ್ತು ಕನ್ನಡ ವಿಭಾಗವು ಎರಡು ದಿನದ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿನ ಮಾಜಿ ಕುಲಪತಿಗಳಾಗಿರುವ, ನಾಡಿನ ಹಿರಿಯ ವಿದ್ವಾಂಸ ಡಾ. ವಿವೇಕ ರೈ ಅವರು ಆಗಮಿಸಿದ್ದರು. 'ಶತಮಾನದ ಹಿನ್ನೆಲೆಯಲ್ಲಿ ಶಿವರಾಮ ಕಾರಂತ' ಹಾಗೂ ''ಜರ್ಮನಿಯ ಒಳಗಿನಿಂದ; ರಂಗಭೂಮಿ ಮತ್ತು ಸಂಸ್ಕೃತಿ'' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

'ಶತಮಾನದ ಹಿನ್ನೆಲೆಯಲ್ಲಿ ಶಿವರಾಮ ಕಾರಂತ' ಹಾಗೂ ೨೬ನೇ ಆದಿತ್ಯವಾರದಂದು ಬೆಳಿಗ್ಗೆ ೧೧ರಿಂದ ೧೨ರವರೆಗೆ ಡಾ.ಬಿ.ಎ ವಿವೇಕ ರೈ ಅವರು ಕಳೆದ ೫ ದಶಕಗಳಿಗಿಂತಲೂ ಹೆಚ್ಚು ಕಾಲ ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನೆಗಳ ಮೂಲಕ ಕರ್ನಾಟಕದಲ್ಲಿ ಕನ್ನಡವನ್ನು ಬೆಳೆಸಿದ ಹಿರಿಯ ವಿದ್ವಾಂಸರು. ವಿವೇಕ ರೈ ಅವರ ತಂದೆಯವರು, ಶಿವರಾಮ ಕಾರಂತರ ಶಿಷ್ಯ ಮತ್ತು ಪರಮ ಅಭಿಮಾನಿ. ಹೀಗೆ ತಂದೆಯ ಸಾಹಿತ್ಯದ ಒಲವು ಇವರಿಗೆ ಬಳುವಳಿಯಾಗಿ ಬಂದಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಡಾ. ವಿವೇಕ ರೈ ಅವರು ತಮ್ಮ ತಂದೆ ಮತ್ತು ಕಾರಂತರ ಅಭಯಹಸ್ತದಲ್ಲಿ ಸಾಹಿತಿಯಾಗಿ ರೂಪುಗೊಂಡರು.

ಕನ್ನಡ ಮತ್ತು ತುಳು ಭಾಷೆಯ ಬಗ್ಗೆ ದಣಿವರಿಯದ ಅಧ್ಯಯನ, ಅಧ್ಯಾಪನ, ಉಪನ್ಯಾಸ ಮತ್ತು ಕ್ಷೇತ್ರಕಾರ್ಯಾಧರಿತವಾದ ಸಂಶೋಧನೆ ನಡೆಸುತ್ತಾ ಬಂದಿರುವ ಡಾ.ಬಿ.ಎ.ವಿವೇಕ ರೈ ಅವರು ಕರ್ನಾಟಕ ಕಂಡ ಅಪೂರ್ವ ಸಂಸ್ಕೃತಿ ಚಿಂತಕರಲ್ಲಿ ಒಬ್ಬರು. ತಮ್ಮ ನೇರ ನಡೆ, ನುಡಿ ಮತ್ತು ಜಾತ್ಯಾತೀತ ನಿಲುವುಗಳಿಂದ ಹಾಗೂ ವೈವಿಧ್ಯಮಯ ಬರಹಗಳ ಮೂಲಕ ಅವರು ಕನ್ನಡದ ಆಂತರಿಕ ಶಕ್ತಿಯನ್ನು ಸಂವರ್ಧಿಸಿದ ರೀತಿ ಅನುಪಮವಾದುದು. ಕನ್ನಡ ಮತ್ತು ತುಳು ಭಾಷೆಯ ಸಂಪತ್ತನ್ನು ವಿಶ್ವಕ್ಕೆ ತಿಳಿಸಿ ಹೇಳಲು ಅವರು ಪಟ್ಟ ಶ್ರಮ ಚಾರಿತ್ರಿಕವಾದುದು. ಡಾ. ರೈ ಅವರ ಕೆಲವು ನಿಲುವುಗಳು ನಮ್ಮ ಅಧ್ಯಯನ ಮಾದರಿಗಳನ್ನೇ ಎಷ್ಟೋ ಬಾರಿ ಅಮೂಲಾಗ್ರವಾಗಿ ಬದಲಾಯಿಸಿವೆ.

ಡಾ.ಬಿ.ಎ ವಿವೇಕ ರೈ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಗಳಾಗಿ, ಜರ್ಮನಿಯ ವ್ಯೂರ್ತ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಇಂಡೋಲಜಿ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ, ಮಂಗಳೂರು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಜಾಗತಿಕ ಮಟ್ಟದಲ್ಲಿ ಕನ್ನಡಕ್ಕೆ ನೆಲೆ ಬೆಲೆಯನ್ನು ತಂದು ಕೊಟ್ಟವರು. ಶೈಕ್ಷಣಿಕ ಕ್ಷೇತ್ರದಲ್ಲಿ ಇವರು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಕರ್ನಾಟಕ ಜಾನಪದ ಮತ್ತು .ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಇವರು ಮಾಡಿದ ಸೇವೆ ಅನುಪಮವಾದುದು.

ತುಳುಗಾದೆಗಳು, ತುಳು ಒಗ್ಗಟ್ಟುಗಳು, ತೌಳವ ಸಂಸ್ಕೃತಿ ಮೊದಲಾದ ಕೃತಿಗಳನ್ನು ರಚಿಸಿದ ಇವರು ತುಳು ಸಾಹಿತ್ಯಕ್ಕೆ ತಮ್ಮದೇ ಆದ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಅಲ್ಲದೆ ಭಾರತೀಯ ಪರಂಪರೆ ಮತ್ತು ಸಾಹಿತ್ಯದಲ್ಲಿ ಒಗಟು, ಗಿಳಿಸೂಚಿ, ಇರುಳು ಕಣ್ಣು, ಜರ್ಮನಿಯ ಒಳಗಿಂದ ಮೊದಲಾದ ಕೃತಿಗಳನ್ನು ಸಾಹಿತ್ಯ ಲೋಕದ ಮಡಿಲಿಗೆ ಅರ್ಪಿಸಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ತುಳು ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ ಹೀಗೆ ಅನೇಕಾನೇಕ ಪ್ರಶಸ್ತಿಗಳು ಇವರ ಹಿರಿಮೆಗೆ ಸಂದ ಗರಿಮೆಯಾಗಿದೆ.

ಅಂದು ಡಾ. ವಿವೇಕ ರೈ ಅವರನ್ನು ಸಂದರ್ಶಿಸಲು ನಾನು ಮತ್ತು ಭವಾನಿ ಮೇಡಮ್ ಸುಮಾರು ಒಂದು ಐದು ಗಂಟೆಯ ಹೊತ್ತಿಗೆ ಡಾ. ವಿವೇಕ ರೈ ಅವರು ನೆಲೆ ನಿಂತಿರುವ ಅತಿಥಿ ಗೃಹಕ್ಕೆ ಹೋದೆವು. ಮನಸ್ಸಿನಲ್ಲಿ ಏನೋ ಒಂದು ರೀತಿಯ ಭಯ. ಎರಡು ವಿಶ್ವವಿದ್ಯಾಲಯಗಳ ಕುಲಪತಿಗಳು. ಹೇಗೆ ಮಾತನಾಡುವರೋ ಗೊತ್ತಿಲ್ಲ. ಅವರ ಕೊಠಡಿಯನ್ನು ಹೊಕ್ಕ ಕೂಡಲೇ ನಮಗೆ ಸಿಕ್ಕ ಆತ್ಮೀಯತೆಯ ಸ್ವಾಗತ ಮನದಲ್ಲಿ ಮನೆಮಾಡಿದ್ದ ಭಯವಲ್ಲ ಹೊರಟು ಹೋಯಿತು. ನೀಳ ಕಾಯ ಶರೀರ, ಗಂಭೀರವಾದರೂ ಮೊಗದಲ್ಲಿರುವ ಮುಗ್ಧತೆ ಎಲ್ಲರನ್ನೂ ಆಕರ್ಷಿಸುವಂತಿತ್ತು.



ನಾವು ಕೇಳಿದ ಪ್ರಶ್ನೆಗಳಿಗೆ ಸಮಾಧಾನದಿಂದ, ಬಹು ಆತ್ಮೀಯತೆಯಿಂದ ಉತ್ತರಿಸಿದರು. ಆ ದಿನ ಒಂದು ರೀತಿಯ ಸ್ನೇಹಪೂರ್ಣ ವಾತಾವರಣಕ್ಕೆ ಎಡೆ ಮಾಡಿಕೊಟ್ಟರು.

ಪ್ರಶ್ನೆ : ನಿಮಗೆ ಕನ್ನಡ ಸಾಹಿತ್ಯದಲ್ಲಿ ನಿಮಗೆ ಹೇಗೆ ಆಸಕ್ತಿ ಬೆಳೆಯಿತು. ಯಾರ ಪ್ರಭಾವ ನಿಮ್ಮ ಮೇಲಾಯಿತು?

ಉತ್ತರ: ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಉಂಟಾಗಲು ಕಾರಣ ಮೊದಲನೆಯದಾಗಿ ನಮ್ಮ ತಂದೆ. ನಮ್ಮ ತಂದೆಯವರು ಸಣ್ಣ ಪ್ರಮಾಣದಲ್ಲಿ ಶಿಕ್ಷಕರಾಗಿದ್ದರು. ಅಗ್ರಹಾರ ಪುರಂದರ ರೈ ಅಂತ ಅವರ ಹೆಸರು. ಅವರು ಶಿವರಾಮ ಕಾರಂತರ ಶಿಷ್ಯರಾಗಿದ್ದರು. ಕಾರಂತರ ಮಕ್ಕಳ ಕೂಟದಲ್ಲಿ ಭಾಗವಹಿಸುತ್ತಿದ್ದರು. ಇದು ಸುಮಾರು 1936ರ ಕಾಲದ್ದು. ಕಾರಂತರ ಪ್ರಭಾವದಿಂದ ತಂದೆಯವರು ಆ ಕಾಲದ ಪತ್ರಿಕೆಗಳಿಗೆ ಕಥೆ, ಲೇಖನ, ಅಂಕಣಗಳನ್ನು ಬರೆಯುತ್ತಿದ್ದರು. ಹಾಗಾಗಿ ಮನೆಯಲ್ಲಿ ನಮಗೆ ಸಾಹಿತ್ಯದ ವಾತಾವರಣವಿತ್ತು. ನಮ್ಮ ತಾಯಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಎಲ್ಲ ವಾಚನ ಮಾಡುತ್ತಿದ್ದರು. ಆ ಕಾಲದಲ್ಲಿ ಹೆಚ್ಚಿನ ಶಿಕ್ಷಣವಿರಲಿಲ್ಲೊಅ. ಆದರೂ ಇದರ ಬಗ್ಗೆ ತಿಳಿದಿದ್ದರು. ನನಗೆ ಸಾಹಿತ್ಯದಲ್ಲಿ ಆಸಕ್ತಿ ಬರಲು ನನ್ನ ತಂದೆಯ ಪ್ರಭಾವವೇ ಕಾರಣ.

ಆದರೆ ಕನ್ನಡ ಎಂ.ಎ. ಮಾಡಬೇಕೆಂದು ಬಯಸಿದವನಲ್ಲ. ನಾನು ವಿಜ್ಞಾನ ಪದವೀಧರ. ಬಿ.ಎಸ್.ಸಿ (ಪಿ.ಸಿ.ಎಂ.) ಮಾಡಿದ್ದೇನೆ. ನಾನು ಆಕಸ್ಮಿಕವಾಗಿ ಕನ್ನಡ ಸಾಹಿತ್ಯಕ್ಕೆ ಬಂದೆ. ನನಗೆ ಎಂ.ಎಸ್.ಸಿ. ಫಿಸಿಕ್ಸ್ ಮಾಡಾಬೇಕೆಂದಿತ್ತು. ಆ ಕಾಲದಲ್ಲಿ ಮೈಸೂರು ವಿಶ್ವವಿದ್ಯಾಲಯದವರು ಮಂಗಳೂರಿನಲ್ಲಿ ಒಂದು ಪಿ.ಜಿ. ಸೆಂಟರ್ ತೆಗೆದರು. ಇದು ಸುಮಾರು 1968ರಲ್ಲಿ ನಡೆದ ಸಂಗತಿ. ಅಲ್ಲಿ ಅವರು ಕನ್ನಡ ಭಾಷೆಯಾಗಿ ಓದಿದವರು 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದವರಿಗೆ ಮೊದಲ ಪ್ರಾಶಸ್ತ್ಯ ನೀಡಿದ್ದರು. ನಾನು ಸುಮ್ಮನೆ ಅದಕ್ಕೆ ಅರ್ಜಿಯನ್ನು ಹಾಕಿದೆ. ಪರಮೇಶ್ವರ ಭಟ್ಟರು ಆಗ ಅಲ್ಲಿಗೆ ಪ್ರೊಫೆಸರ್ ಆಗಿ ಬಂದರು. ನನಗೆ ಸೀಟು ಸಿಕ್ಕಿತು. ಆಗ ಕನ್ನಡಕ್ಕೆ ನಾನು

ಉತ್ಸಾಹದಿಂದ ಹೋದುದಲ್ಲ. ತಂದೆಯವರು ಹೋಗು ಅಂದರು ಅಲ್ಲದೆ ತಂದೆಯವರು ಕಾರಂತರ ಹತ್ತಿರ ಕೇಳಿದರು. ಕಾರಂತರು ಕೂಡ ಹೋಗಿ ಅಂತ ಹೇಳಿದರು. ಇಲ್ಲದಿದ್ದರೆ ಕನ್ನಡಕ್ಕೆ ಬರುವ ಯೋಚನೆಯೇ ಇರಲಿಲ್ಲ ನನಗೆ.

ಪ್ರಶ್ನೆ: ಜಾನಪದ ಸಾಹಿತ್ಯದಲ್ಲಿ ಅಭಿರುಚಿ ಹೇಗೆ ಬಂತು? ಅದರ ಬಗ್ಗೆ ನಮಗೆ ತಿಳಿಸಿಕೊಡುವಿರಾ?

ಉತ್ತರ: ಜಾನಪದಲ್ಲಿ ಆಸಕ್ತಿ ಹುಟ್ಟಲು ಕಾರಣ ನಾನು ಹಳ್ಳಿಯಲ್ಲಿ ಹುಟ್ಟಿ ಬೆಳೆದವನು. ನಮ್ಮ ಹಳ್ಳಿಯಿಂದ ಕಾರಂತರ ಮನೆಗೆ ಸುಮಾರು ಒಂದು ಆರು ಮೈಲು ದೂರವಿತ್ತು. ಕಾರಂತರ ಮನೆಗೆ ಸಾಮಾನ್ಯ ತಂದೆಯವರು ಆಗಾಗ ಅಲ್ಲಿಗೆ ಹೋಗಿ ಬರುತ್ತಿದರು. ಕಾರಂತರಲ್ಲಿಗೆ ಯಾರಾದರೂ ಸಾಹಿತಿಗಳು ಬಂದರೆ ಮಾತನಾಡಲಿಕ್ಕೆ ಹೋಗುತ್ತಿದ್ದರು. ಹಾಗಾಗಿ ನಮಗೆ ಚಿಕ್ಕದಿಂದಲೂ ಸಂಪರ್ಕವಿತ್ತು. ಹಳ್ಳಿಯಲ್ಲಿದ್ದ ಕಾರಣ ನಮಗೆ ಸಣ್ಣ ಕೃಷಿಯಿತ್ತು. ಭತ್ತ, ಅಡಿಕೆ, ತೆಂಗು ಇವುಗಳು ಬೆಳೆಯುತ್ತಿದ್ದವು. ಕೃಷಿಯ ಜೊತೆಗೆ ಕೃಷಿಗೆ ಸಂಬಂಧಪಟ್ಟ ಹಾಡುಗಳನ್ನು ಕೇಳುತ್ತಿದ್ದೆವು. ಚಾಲ್ತಿಯಲ್ಲಿದ್ದ ಅನೇಕ ಆಚರಣೆಗಳು ಭೂತ ಕೋಲ ಇದೆಲ್ಲ ನಡೆಯುತ್ತಾ ಇತ್ತು. ಆದರೆ ಜಾನಪದದಲ್ಲಿ ನಾನೇನು ಅಧ್ಯಯನ ಮಾಡಬೇಕೆಂದು ನಿಶ್ಚಯ ಮಾಡಿದವನಲ್ಲ. ಎಂ.ಎ. ಮಾಡುತ್ತಿದ್ದಾಗ ಪ್ರೊ. ಪರಮೇಶ್ವರ ಭಟ್ಟರು ನನಗೆ 'ನಿಮ್ಮದು ತುಳು ಮಾತೃಭಾಷೆಯಾದುದರಿಂದ ಅದರ ಕಲೆಗಳ ಬಗ್ಗೆ ಸೆಮಿನಾರ್ ಮಾಡು' ಎಂದರು. ಹಾಗೆ ನಾನು ದಕ್ಷಿಣ ಜಾನಪದ ಕಲೆಗಳ ಬಗ್ಗೆ ಸೆಮಿನಾರ್ ಮಾಡಿದ್ದೆ. 1969ರಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಮಂಗಳೂರಿನಲ್ಲಿ ಒಂದು ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ನಡೆಯಿತು. ಸಿಂಪಿ ಲಿಂಗಣ್ಣ, ಹಾಮಾನಾ, ಜವರೇಗೌಡರು, ನಾಗೇಗೌಡರು ಮೊದಲಾದ ಖ್ಯಾತ ಸಾಹಿತಿಗಳು ಭಾಗವಹಿಸಿದ್ದರು. ಅಲ್ಲಿಂದ ನಾನು ಎಂ.ಎ. ಮುಗಿಸಿದ ಮೇಲೆ ನನ್ನ ಅಧ್ಯಾಪಕರು ರಾಮೇಗೌಡರು 'ನಮ್ಮ ಗಾದೆಗಳು' ಎಂಬ ಪುಸ್ತಕ ಕೊಟ್ಟು ನೀವೇಕೆ ನಿಮ್ಮ ಮಾತೃಭಾಷೆಯ ಗಾದೆಗಳನ್ನು ಸಂಗ್ರಹ ಮಾಡಿ ಒಂದೆಡೆ ಕಲೆಹಾಕಬಾರದು ಎಂದು ಕೇಳಿದರು. ಅಲ್ಲಿಯವರೆಗೆ ಜಾನಪದ ಅಂದರೆ ಏನೂ ಅಂತ ಗೊತ್ತಿರಲಿಲ್ಲ. ಎಂ.ಎ. ಯಲ್ಲಿ ಶಾಸ್ತ್ರೀಯ ಜಾನಪದ ಓದಿದವನೂ ಅಲ್ಲ. ಎಂ.ಎ. ಯಲ್ಲಿ ಉಳಿದ ವಿಷಯಗಳೊಂದಿಗೆ ಪಂಪ, ವಚನಸಾಹಿತ್ಯ, ಲಲಿತಪ್ರಬಂಧ ನನ್ನ ವಿಶೇಷ ವಿಷಯಗಳಾಗಿದ್ದವು. ಅಕಾಡೆಮಿಕ್ ಆಗಿ ಜಾನಪದ ಓದಿದವನೂ ಅಲ್ಲ. ಅಲ್ಲಿಂದ ನಾನು ತುಳು ಗಾದೆಗಳನ್ನು ಕಲೆಹಾಕಲು ಶುರು ಮಾಡಿದೆ. 1971ರಲ್ಲಿ ಗಾದೆಗಳು ಅಂತ ನನ್ನ ಮೊದಲನೇ ಪುಸ್ತಕ ಪ್ರಕಟವಾಯಿತು. ಪರಮೇಶ್ವರ ಭಟ್ಟರು ಒಗಟುಗಳ ಬಗ್ಗೆ ಮಾಡಲು ಹೇಳಿದರು. ಆ ಪುಸ್ತಕವು 1971ರಲ್ಲಿ ಪ್ರಕಟವಾಯಿತು. ಆಮೇಲೆ ನಾನು ಪಿಎಚ್.ಡಿ ಮಾಡಲು ಹೋದೆ. ಆಗ ಮಂಗಳೂರು ವಿಶ್ವವಿದ್ಯಾಲಯ ಪ್ರಾರಂಭವಾಗಿರಲಿಲ್ಲ. ಮೈಸೂರು ವಿಶ್ವವಿದ್ಯಾಲಯವೇ ನಮಗೆಲ್ಲ ಇದ್ದಿದ್ದು. ಕನ್ನಡ ವಿಶ್ವವಿದ್ಯಾಲಯದಲ್ಲಿ ಹಾಮಾನಾ ನಿರ್ದೇಶಕರಾಗಿದ್ದರು. ಆಗ ನಮ್ಮಲ್ಲಿ ಗೈಡ್ ಯಾರೂ ಇಲ್ಲ. ನೀವೇ ಗೈಡ್ ಆಗಬೇಕೆಂದು ಹಾಮಾನಾ ಅವರಲ್ಲಿ ಕೇಳಿಕೊಂಡೆ. ಆಗ ಅವರು ತುಳು ಜಾನಪದಲ್ಲಿ ಪಿಎಚ್.ಡಿ ಮಾಡಲು ತಿಳಿಸಿದರು. ಪಿಎಚ್.ಡಿ ಅಧ್ಯಯನವನ್ನು 1972ಕ್ಕೆ ಶುರುಮಾಡಿ 1978ರಲ್ಲಿ ಮುಗಿಸಿದೆ. ಮೈಸೂರು ವಿಶ್ವವಿದ್ಯಾಲಯದಿಂದ ತುಳು ಜಾನಪದಕ್ಕೆ ಸಿಕ್ಕ ಮೊದಲನೇ ಅವಾರ್ಡ್ ಆಗಿತ್ತು ಅದು. ಆಮೇಲೆ ಪ್ರಾಜೆಕ್ಟ್‌ಗಳಲ್ಲಿ ಫಿನ್‌ಲ್ಯಾಂಡ್, ಅಮೇರಿಕಾ, ಇಂಗ್ಲೆಂಡ್‌ಗಳಲ್ಲಿ ಕೆಲಸ ಮಾಡಿದೆ. ಪಂಪನನ್ನು ನಾನು 25 ವರ್ಷ ಪಾಠ ಮಾಡಿದೆ. ಎಂ.ಎ. ಯಲ್ಲಿ ಜಾನಪದ ಪಾಠ ಮಾಡ್ತಾ ಇದ್ದೆ. ಆದರೆ ನನ್ನ ಆಸಕ್ತಿಯ ವಿಷಯ ಪ್ರಾಚೀನ ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆ. ಉಳಿದ ವಿಷಯಗಳನ್ನೂ ಕೂಡ ಪಾಠ ಮಾಡಿದ್ದೆ. ಇಲ್ಲ ಅಂತಲ್ಲ. 36ವರ್ಷ ಅಧ್ಯಾಪನ ವೃತ್ತಿ ಮಾಡಿದ್ದೇನೆ. 2004– 07ರಲ್ಲಿ ಹಂಪಿಯಲ್ಲಿ ವಿ.ಸಿ. ಯಾಗಿ ಆಯ್ಕೆಯಾದೆ. ಮಂಗಳೂರು ಮತ್ತು ಹಂಪಿ ಹೀಗೆ ಎರಡು ವಿಶ್ವವಿದ್ಯಾನಿಲಯಗಳಲ್ಲಿ ವಿ.ಸಿಯಾಗಿ ಕಾರ್ಯನಿರ್ವಹಿಸಿದೆ. ಹಾಗೆ ಎಲ್ಲೂ ಸಾಧ್ಯವಿಲ್ಲ. ಆದರೆ ನನ್ನ ಕೆಲಸದಿಂದ ಅವರು ತುಂಬ ಇಂಪ್ರೆಸ್ ಆಗಿದ್ದರಿಂದ ನನಗೆ ಈ ಸದಾವಕಾಶ ಸಿಕ್ಕಿತು.

ಪ್ರಶ್ನೆ: ಕನ್ನಡದ ಯಾವುದೇ ಪರಿಜ್ಞಾನ ಇಲ್ಲದ ಯುರೋಪಿಯನ್ನರಿಗಾಗಿ 'ಅಂತರಾಷ್ಟ್ರೀಯ ಕನ್ನಡ ಬೇಸಿಗೆ ಶಿಬಿರ'ವನ್ನು ಹಮ್ಮಿಕೊಳ್ಳುತ್ತಾ ಇದ್ದೀರಿ. ಇದರ ಬಗ್ಗೆ ವಿವರಿಸುವಿರಾ? ಅದರ ಬಗ್ಗೆ ವಿದೇಶಿಯರ ಪ್ರತಿಕ್ರಿಯೆ ಹೇಗಿತ್ತು?

ಉತ್ತರ: 3 ವರ್ಷ ಜರ್ಮನ್‌ನಲ್ಲಿ ಅತಿಥಿ ಉಪನ್ಯಾಸಕನಾಗಿ ಕೆಲಸ ಮಾಡಿದೆ. ಆರು ತಿಂಗಳಲ್ಲಿ ನಮ್ಮಲ್ಲಿ ಕಲಿಯುವುದನ್ನು ಅವರು ಮೂರುವರೆ ತಿಂಗಳಿನಲ್ಲಿ ಕಲಿತಿದ್ದರು. ಆರ್ಮನ್ ಅವರಿಗೆ ಗ್ರಾಮರ್ ನಲ್ಲಿ ಪರಿಪೂರ್ಣತೆಯಿತ್ತು. ಜರ್ಮನಿಯ ವ್ಯೂರ್ಟ್ಸ್‌ಬುರ್ಗ್ ವಿಶ್ವವಿದ್ಯಾನಿಲಯದ ಇಂಡಾಲಜಿ ವಿಭಾಗದ ಆಶ್ರಯದಲ್ಲಿ 'ಅಂತಾರಾಷ್ಟ್ರೀಯ ಕನ್ನಡ ಬೇಸಗೆ ಶಿಬಿರ' ಸೆಪ್ಟಂಬರ್ ತಿಂಗಳಿನಲ್ಲಿ ನಡೆಯಿತು. ಕನ್ನಡದ ಯಾವುದೇ ಪರಿಜ್ಞಾನ ಇಲ್ಲದ ಯುರೋಪಿಯನ್ನರಿಗೆ ಪ್ರಾಥಮಿಕ ಹಂತದಲ್ಲಿ ಕನ್ನಡವನ್ನು ಮಾತನಾಡಲು, ಓದಲು ಮತ್ತು ಬರೆಯಲು ಕಲಿಸುವ ಎರಡು ವಾರಗಳ ತೀವ್ರ ಕಲಿಕೆಯ ಈ ಶಿಬಿರದಲ್ಲಿ ನಾನು ಮತ್ತು ಡಾ. ಕತ್ರಿನ್ ಬಿಂದರ್ ಅಧ್ಯಾಪಕರಾಗಿ ಕೆಲಸ ಮಾಡಿದೆವು. ಸಾರಾ ಮೆರ್ಕ್ಲೆ ಶಿಬಿರಾರ್ಥಿಗಳಿಗೆ ಕನ್ನಡದ ಅಕ್ಷರಾಭ್ಯಾಸದ ಜೊತೆಗೆ, ನಾವು ಮಾಡಿದ ಪಾಠಗಳಿಗೆ ಸಂಬಂಧಿಸಿದಂತೆ ಪೂರಕ ವ್ಯಾಸಂಗದ ಅಭ್ಯಾಸ ಮಾಡಿಸಿದರು. ಚಳಿಗಾಲದಲ್ಲೂ ಇಂತಹ ಎರಡು ಶಿಬಿರಗಳನ್ನು ನಡೆಸುತ್ತಿರುತ್ತೇವೆ. ಒಂದು ಬೆಂಗಳೂರಿನಲ್ಲಿ ಇನ್ನೊಂದು ಜರ್ಮನಿಯಲ್ಲಿ.

ಪ್ರಶ್ನೆ: ಕನ್ನಡ ಅಥವಾ ತುಳು ಜಾನಪದ ಸಾಹಿತ್ಯಕ್ಕಿರುವ ಅಡ್ಡಿ ಆತಂಕಗಳೇನು? ಇದರ ಬಗ್ಗೆ ಹೇಳುವಿರಾ?

ಉತ್ತರ: ಜಾನಪದದ ವಿಶ್ವವಿದ್ಯಾಲಯ ಮಾಡಬೇಕು. ಈಗ ಸೌಲಭ್ಯಗಳು ಹೆಚ್ಚಿವೆ. ವಿಶ್ವವಿದ್ಯಾಲಯಗಳಿಗೆ ಗ್ರ್ಯಾಂಡ್ ಸಿಕ್ಕುತ್ತಾ ಇದೆ. ಕೆಲಸ ಮಾಡುವರಿಗೆ ಹಣದ ಕೊರತೆ ಇಲ್ಲ. ಅವಕಾಶಗಳು ಹೆಚ್ಚುತ್ತಿವೆ. ಇವತ್ತಿನ ಪೀಳಿಗೆಯು ಯಾವುದೇ ರಿಸ್ಕ್ ತೆಗೆದುಕೊಳ್ಳಲು ತಯಾರಿಲ್ಲ. ಕೆಲಸಕ್ಕಾಗಿ ಡಿಗ್ರಿ ಅಲ್ಲ. ತಿಳುವಳಿಕೆಗಾಗಿ ಒಂದು ಡಿಗ್ರಿ ಇರಬೇಕು. ಕನ್ನಡಕ್ಕಂತಲ್ಲ ಇತರ ವಿಷಯಗಳಿಗೂ ನೌಕರಿ ಸಮಸ್ಯೆ ಇಲ್ಲ.

ಪ್ರಶ್ನೆ: ಶಿವರಾಮ ಕಾರಂತರೊಂದಿಗಿನ ನಿಮ್ಮ ಒಡನಾಟ ಹೇಗಿತ್ತು? ಅವರೊಂದಿಗೆ ಕಳೆದ ಕ್ಷಣಗಳನ್ನು ಹಂಚಿಕೊಳ್ಳುವಿರಾ?

ಉತ್ತರ: ತಂದೆಯ ಕಾರಣಕ್ಕಾಗಿ ನನಗೆ ಕಾರಂತರ ಒಡನಾಟ ಲಭಿಸಿತು. ಇನ್ನೂ ಹೇಳಬೇಕೆಂದರೆ ನನಗೆ ಹೆಸರು ಇಟ್ಟಿದ್ದೇ ಕಾರಂತರು. ತಂದೆ ವಿವೇಕಾನಂದ ಅಂತ ಹೇಳಿದರು. ಅದಕ್ಕೆ ಕಾರಂತರು ವಿವೇಕಾನಂದ ಬೇಡ. ವಿವೇಕ ಇದ್ದರೆ ಆನಂದ ತನ್ನಿಂದ ತಾನೇ ಬರುತ್ತದೆ. ಆ ಕಾಲದಲ್ಲಿಯೇ ಕಾರಂತರ ಹುಚ್ಚುಮನಸ್ಸಿನ ಹತ್ತು ಮುಖಗಳು, ಮೂಕಜ್ಜಿಯ ಕನಸುಗಳು ಕೃತಿಗಳೂ ಮನೆಯಲ್ಲಿ ಇದ್ದವು. ಲೀಲಾ ಕಾರಂತರು ಮತ್ತು ನಮ್ಮ ತಾಯಿ ಅಕ್ಕ ತಂಗಿಯರ ಹಾಗೆ ಇದ್ದಿದ್ದರು. ಕಾರಂತರು ಕುಟುಂಬದೊಂದಿಗೆ ಬಂದು ನಮ್ಮ ಜೊತೆಯಲ್ಲಿ ಇರುತ್ತಿದ್ದರು. ತಂದೆಯ ಕಾರಂತರ ಮನೆಯಿಂದ ಓದಲು ತರುತ್ತಿದ್ದ ಪುಸ್ತಕವನ್ನು ನಾನು ವಾಪಾಸು ಕೊಡಲು ಹೋಗುತ್ತಿದ್ದೆ. ಹೈಸ್ಕೂಲಿಗೆ ಪುತ್ತೂರಿಗೆ ಹೋದೆ. ಆಗ ಕಾರಂತರು ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದರು. ರಾಜರತ್ನಂ. ನಾ. ಕಸ್ತೂರಿ ಅವರು ಅಲ್ಲಿಗೆ ಬರುತ್ತಿದ್ದರು. ಕಾರಂತರಲ್ಲಿ ಭಯ ಭಕ್ತಿಯ ಭಾವವಿತ್ತು. ಕನ್ನಡ ಎಂ. ಎ. ಮಾಡುವ ಸಂದರ್ಭದಲ್ಲಿ ಕಾರಂತರಲ್ಲಿ ಕೇಳಲು ಹೋದೆ. ಕನ್ನಡ ಎಂ.ಎ. ಮಾಡು ಸಾಹಿತಿಯಾಗುವುದು ಬೇರೆ ಆದರೆ ಸಂಸ್ಕಾರವಾದರೂ ಬರುತ್ತದೆ ಎಂದು ಹೇಳಿದರು. ಫಸ್ಟ್ ರ್ಯಾಂಕ್ ಬಂದಾಗ ಇತರ ಅಧ್ಯಯನವನ್ನು ಮಾಡುವಂತೆ ಪ್ರೇರೇಪಿಸಿದರು. ಅಂತ್ರಾಪೋಲಜಿ

ಓದದೆ ಇದ್ದರೆ ಕಾರಂತರನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ.

ಪ್ರಶ್ನೆ: ತುಳು ಜಾನಪದ ಸಾಹಿತ್ಯದ ಜೀವಂತಿಕೆಗ, ಅದರ ಲವಲವಿಕೆಗೆ ತಾವು ಕೊಟ್ಟ ಕೊಡುಗೆ ಅಪಾರವಾದುದು. ಈ ನಿಟ್ಟಿನಲ್ಲಿ ಇನ್ನು ಮುಂದೆ ಮಾಡಬೇಕಾಗಿರುವ ಸಂಶೋಧನೆಯ ಬಗ್ಗೆ ತಾವೇನಾದರೂ ಯೋಜನೆ ಹಾಕಿಕೊಂಡಿದ್ದೀರಾ?

ಉತ್ತರ: ತುಳು ಜಾನಪದಲ್ಲಿ ಸಾಕಷ್ಟು ಕ್ಷೇತ್ರ ಕಾರ್ಯ ನಡೆಯಬೇಕಾಗಿದೆ. ದಾಖಲೀಕರಣ ಬಹಳ ತುರ್ತಾಗಿ ಮಾಡಬೇಕಾಗಿದೆ. ಹೊಸ ತಲೆಮಾರು ಇದರಲ್ಲಿ ಯಾವ ಆಸಕ್ತಿಯನ್ನು ತೋರಿಸುತ್ತಿಲ್ಲ. ಹಳೆಯ ತಲೆಮಾರುಗಳು ಮರೆಯಾಗುತ್ತಿವೆ.

ಪ್ರಶ್ನೆ : ಜರ್ಮನ್‌ನಲ್ಲಿ ಕನ್ನಡವನ್ನು ಕಟ್ಟುವ ಕಾಯಕದಲ್ಲಿ ತಮ್ಮನ್ನು ಯಾವ ರೀತಿ ತೊಡಗಿಸಿಕೊಂಡಿದ್ದೀರಿ.

ಉತ್ತರ: ಜರ್ಮನಿಯರಿಗೆ ಭಾಷೆಯನ್ನು ಮೊದಲು ಕಲಿಸಿದೆ. ವಚನ, ಕುವೆಂಪು, ಅನಿಕೇತನ, ದಾಸರ ಕೀರ್ತನೆಗಳು, ಜನಪದ ಕಾವ್ಯಗಳನ್ನು ಓದಿಸುತ್ತಾ ಕನ್ನಡ ಭಾಷೆಯ ಜೊತೆಗೆ ಕನ್ನಡ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅಭಿರುಚಿ ಹುಟ್ಟಿಸುವ ಪ್ರಯತ್ನ ಮಾಡಿದ್ದೆ.

ಪ್ರಶ್ನೆ : ಈವಾಗಿನ ಕನ್ನಡ ಸಾಹಿತ್ಯ ಅಥವಾ ಕನ್ನಡ ಭಾಷೆಯ ಬಗ್ಗೆ ನಿಮ್ಮ ನಿಲುವನ್ನು ವ್ಯಕ್ತಪಡಿಸುವಿರಾ?

ಉತ್ತರ: ಕನ್ನಡ ಭಾಷೆ ನಶಿಸುತ್ತಿಲ್ಲ. ಬದಲಾಗುತ್ತ ಇದೆ. 6000 ಮಂದಿ ಬ್ಲಾಗ್ ಬರೆಯುತ್ತಿದ್ದರೆ, ಇಂಟರ್‌ನೆಟ್, ಅವಧಿ, ಆನ್‌ಲೈನ್ ಎಲ್ಲವೂ ಹೆಚ್ಚಾಗುತ್ತಾ ಇದೆ. ಕನ್ನಡ ವಿಕಿಪೀಡಿಯಾ, ಕಣಜದಲ್ಲಿ ಕನ್ನಡದ ಬಳಕೆ ಜಾಸ್ತಿಯಾಗುತ್ತಿದೆ. ಈಗಿನವರಿಗೆ ಹಳೆಗನ್ನಡದಲ್ಲಿ ಆಸಕ್ತಿ ಇಲ್ಲ. ಆದ್ದರಿಂದ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಅಷ್ಟೆ. ನಗರಗಳಲ್ಲಿ ಅನ್ಯಭಾಷೆಯ ಮಿಶ್ರಣ ಜಾಸ್ತಿಯಾಗುತ್ತಿದೆ. ಆದರೆ ಅನ್ಯ ಭಾಷೆ ಕಲಿಯುವುದರಲ್ಲಿ ಯಾವುದೇ ತಪ್ಪಿಲ್ಲ. ಜ್ಞಾನಕ್ಕಾಗಿ ಇನ್ನೊಂದು ಭಾಷೆಯನ್ನು ಕಲಿಯಬೇಕು. ಕನ್ನಡದ ಸಂದರ್ಭದಲ್ಲಿ ಆಳ ಸ್ವಲ್ಪ ಕಡಿಮೆ ಇದೆ. ಆದರೆ ಈಗ ಬರವಣಿಗೆ ಹೆಚ್ಚಾಗ್ತ ಇದೆ. ಆದರೆ ಅಧ್ಯಯನಶೀಲತೆ ಕಡಿಮೆಯಾಗಿದೆ.

ಪ್ರಶ್ನೆ: ಕನ್ನಡದಲ್ಲಿ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ವಿದ್ಯಾರ್ಥಿಗಳಿಗೆ ನಿಮ್ಮ ಕಿವಿಮಾತು ಏನು?

ಉತ್ತರ: ಮೊದಲು ವಿಷಯದ ಆಯ್ಕೆ ಬಹು ಮುಖ್ಯವಾದುದು. ಸಂಶೋಧನ ವಿದ್ಯಾರ್ಥಿಗಳು ವಿಷಯವನ್ನು ಆರಿಸುವ ಮೊದಲು ಅದರ ಬಗ್ಗೆ ಈಗಾಗಲೇ ಪೂರ್ಣವಾಗಿ ಏನೇನು ಕೆಲಸಗಳೇನಿದೆ ಅನ್ನೋದನ್ನು ತಿಳಿದುಕೊಳ್ಳಬೇಕು. ರಿಸರ್ಚ್ ಮೆಥಡೋಲಜಿ ಮತ್ತು ಯಥಾವತ್ತಾಗಿ ವಿಷಯದ ಮೇಲೆ ಅಧ್ಯಯನ ನಡೆಸಬೇಕು. ಸಾಮಾಗ್ರಿಗಳ ಸಂಗ್ರಹಣೆ ಮಾಡಬೇಕು. ಕ್ಷೇತ್ರ ಕಾರ್ಯ ಮಾಡಬೇಕು, ಹಳೆಯ ಗ್ರಂಥಾಲಯದಲ್ಲಿ ಇವರೆಗಿನ ಹೆಚ್ಚಿನ ಚರ್ಚೆಗಳು ಏನೇನು ಬಂದಿವೆ ಅನ್ನೋದನ್ನು ಅಧ್ಯಯನ ಮಾಡಬೇಕು. ಅಧ್ಯಯನದಲ್ಲಿ ಪರಿಪೂರ್ಣತೆ ಇರಬೇಕು. ಒಟ್ಟಿನಲ್ಲಿ ಸಂಶೋಧನ ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಶ್ರದ್ಧೆ, ನಿಷ್ಠೆ ಇರಬೇಕು.

ಒಟ್ಟಾರೆ ಡಾ. ಬಿ.ಎ. ವಿವೇಕ ರೈ ಅವರೊಂದಿಗೆ ಕಳೆದ ಸಂಜೆ ಅವಿಸ್ಮರಣಿಯದಾಗಿತ್ತು. ಹೀಗೆ ಡಾ. ವಿವೇಕ ರೈ ಅವರು ನಮ್ಮೊಂದಿಗೆ ಅವರ ಮನದಾಳದಲ್ಲಿ ಹುದುಗಿದ್ದ ವಿಚಾರಗಳನ್ನು ಹಂಚಿಕೊಂಡರು. ಬಹಳ ಹುರುಪಿನಿಂದಲೇ ವಿವೇಕ ರೈ ಅವರು ಇಲ್ಲಿಯ ಪ್ರಶ್ನೆಗಳಿಗೆ ಉತ್ತರಿಸಿದರು. ಅದನ್ನು ಇಲ್ಲಿ ಲೇಖನರೂಪದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ.

– ಡಾ. ಜ್ಯೋತಿ ಸತೀಶ್

# ಬದುಕಿನ ಕಥೆಯೊಡನೆ ಸಂಧಿಸಿ ಬಂದಾಗ

ಶ್ರೀ ಗೋಪಾಲ ತ್ರಾಸಿಯವರು ಮುಂಬಯಿಯ ಉದಯೋನ್ಮುಖ ಬರಹಗಾರರಲ್ಲಿ ಒಬ್ಬರು. ವೃತ್ತಿಯಲ್ಲಿ ಬ್ಯಾಂಕ್ ಉದ್ಯೋಗಿಯಾಗಿದ್ದು, ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ನೆಲದ ನಕ್ಷತ್ರಗಳು' 'ಬೊಗಸೆಯೊಡ್ಡುವ ಸಂತಸದ ಕ್ಷಣಗಳು' ಇವರ ಪ್ರಕಟಿತ ಕವನ ಸಂಕಲನಗಳು. ಪ್ರಸ್ತುತ ಕಥಾಸಂಕಲನ 'ಕತೆಯೊಳಗಿನ ಬದುಕು' ತ್ರಾಸಿಯವರ ಪ್ರಥಮ ಕಥಾಸಂಕಲನವಾಗಿದೆ. ಶ್ರೀಯುತ ಸದಾನಂದ ಸುವರ್ಣರ ಸುವರ್ಣಗಿರಿ ಪ್ರಕಾಶನದ ಹದಿಮೂರನೇ ಕೃತಿಯಾಗಿ ಈ ಸಂಕಲನ ಹೊರ ಬಂದಿದೆ. ಮಿತ್ರಾ ವೆಂಕಟ್ರಾಜ್‌ರವರು ಮುನ್ನುಡಿಯಲ್ಲಿ ಹೇಳಿರುವಂತೆ ಇಲ್ಲಿನ ಕಥೆಗಳು ಸಹೃದಯತೆ, ಸ್ನೇಹಪರತೆ, ಸೂಕ್ಷ್ಮ ಸಂವೇದನೆಯನ್ನು ಹೊಂದಿವೆ. ಜೀವನದಲ್ಲಿನ ಭರವಸೆ, ತಾರುಣ್ಯದ ಸಂವೇದನೆ, ತುಮುಲಗಳು, ಪ್ರೌಢತೆಯು ಕಾಡುವ ಬಗೆ, ಕಷ್ಟ ತಾಕಲಾಟ, ಮದುವೆ ಭಗ್ನ ಪ್ರೇಮ ವಿಭಿನ್ನ ರೀತಿಗಳಲ್ಲಿ ಈ ಕಥಾಸಂಕಲನದಲ್ಲಿ ಬಿತ್ತರವಾಗಿದೆ. ನಾಟಕನ ದೃಷ್ಟಿಯಿಂದಲೇ ಸಾಗುವ ಕಥೆಗಳು ಇಲ್ಲಿ ಪ್ರಧಾನವಾಗಿದೆ. ಮುಂಬಯಿ ನಿತ್ಯ ಜೀವನ ಮತ್ತು ಅದು ಕಾಡಿದ ರೀತಿಯನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಎಲ್ಲೂ ಬಿಡದ ಊರಿನ ನಂಟು ಅವರ ಅನೇಕ ಕಥೆಗಳಲ್ಲಿ ಅಂಟಿಕೊಂಡಿದೆ. ಇವು ಕೆಲವೊಮ್ಮೆ ಹುಟ್ಟೂರು ...... ಮತ್ತು ಮುಂಬೈ ನಡುವಿನ ಸೇತುವೆಯಾಗಿರುವುದು ಗಮನಾರ್ಹ.

ಮೊದಲ ಕಥೆ 'ಆ ಕ್ಷಣದ ಸತ್ಯ' ಟಾಟಾ ರಾಜುವಿನ ಜೀವನ ತುಂಬಾ ಭರವಸೆಯಿಂದ ಆರಂಭಗೊಳ್ಳುವಂತೆ ಚಿತ್ರಿಸಿದೆ. ಕಥೆ ಸಾಗಿದಂತೆ ಏನೋ ಅನಿವಾರ್ಯತೆಗಳ ಬಲಿಪಶುವಾದಂತೆ ದುರಂತವನ್ನು ಕಾಣುವ ರಾಜು, ನಮ್ಮೆಲ್ಲರ ಸಹಾನುಭೂತಿಗೆ ಪಾತ್ರನಾಗುತ್ತಾನೆ. ಬಿ.ಕಾಂ. ಆದರೂ ಸಿಪಾಯಿ ಹುದ್ದೆಯಲ್ಲಿರುತ್ತಾನೆ. ಊರಿನಲ್ಲಿನ ಅಮ್ಮ, ತಂಗಿ ಮತ್ತು ತಮ್ಮನ ಜೀವನ ಸಾಗಿಸುವ ಭಾರ ಈತನದು. 'ಬಲಿ' ಎಂಬ ಜಾತಿ ಪದ್ಧತಿಯ ಒಳಸುಳಿಗೆ ಪ್ರೀತಿಸಿದ ಶ್ವೇತಳಿಂದ ದೂರವಾಗುತ್ತಾನೆ. ಈ ಮಧ್ಯೆ ಸಮಾಜದ ಒತ್ತಾಯಕ್ಕೆ ರಮಾಳನ್ನು ವರಿಸುತ್ತಾನೆ. ಸೋದರ ಮಾವ ಸುಳ್ಳು ಹೇಳಿ ಮಾಡಿಸಿದ ಮದುವೆ ಹೆಂಡತಿ ಮತ್ತು ಮಾವ ಸುಬ್ಬಣ್ಣನವರಿಂದ ಒಡೆದು ಹೋಗುತ್ತದೆ. ಡೈವೋರ್ಸು ನೋಟೀಸ್ ಕೈ ಸೇರಿದ ದಿನ ರಾಜು ಖಿನ್ನನಾಗುತ್ತಾನೆ. ದಿನಾ ಕೆಲಸಕ್ಕೆ ಹೋಗುವ ದಾರಿಯಲ್ಲಿ ಟ್ರ್ಯಾಕ್ ಮೇಲೆ ಮಲಗಿ ಲೋಕಲ್ ಟ್ರೈನ್‌ಗೆ ಬಲಿಯಾಗುತ್ತಾನೆ. ಮೃತ್ಯು ಆ ಕ್ಷಣಕ್ಕೆ ಆತನಿಗೆ ಸತ್ಯವಾಗಿ ಕಂಡುದ್ದು ಕಥೆಗಾರನ ಕೈಯಲ್ಲಿ ಚೆನ್ನಾಗಿ ಮೂಡಿದೆ. "ರಾಜು ಮಾತ್ರ ಇನ್ನು ಮುಂದೆ ಯೂನಿಫಾರಂ ಧರಿಸಿ ಇಲ್ಲೆಲ್ಲೋ ಓಡಾಡುವುದಿಲ್ಲ" ಎಂಬ ನಿಟ್ಟುಸಿರು ಕಥೆಗೆ ಕೊನೆಯನ್ನು ಹಾಡುತ್ತದೆ.

'ಕಥೆಯೊಳಗಿನ ಬದುಕು' ಕಥೆಯಲ್ಲಿ ಸ್ವತಃ ಪಾತ್ರಧಾರಿಯಾಗಿದ್ದುಕೊಂಡು ಬದುಕಿನ ಮಗ್ಗುಲನ್ನು ಬಿಡಿಸಿಟ್ಟ ಚಿತ್ರಣವಿದೆ. ಮುಂಬೈ ಬದುಕಿನ ಚಾಳ್ ಪದ್ಧತಿಯ ಪಾಯಿಖಾನೆಯ ಪರದಾಟದಿಂದ ಕಥೆ ಆರಂಭಗೊಳ್ಳುತ್ತದೆ. ಸಣ್ಣಪುಟ್ಟ ಜಗಳಗಳು ಆಫೀಸಿನ ಗೆಳತಿ ಝುರೀನಾಳ ಹಿತನುಡಿಗಳು, ..... ಶಶಿಧರನ ಚಿಂತನಕ್ರಮವನ್ನು ನಿಧಾನವಾಗಿ ಬದಲಿಸುವ ರೀತಿ ಕಂಡು ಬರುತ್ತದೆ. ಮಾವ ನಿರುದ್ಯೋಗಿಯಾದ ತನಗೆ ಮಗಳನ್ನು ಮದುವೆ ಮಾಡಲಿಲ್ಲ ಎಂಬ ಬೇಸರದಿಂದ ಮುಂಬೈಯ ದಾರಿ ಹಿಡಿದ ಕತೆ. ಮುಂಬೈಯು ತನಗೆ ಒಗ್ಗಿ ಕೊಳ್ಳದ ರೀತಿ ಶಶಿಧರನ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ. ಗೆಳೆಯ ಸಂಜೀವನೊಂದಿಗೆ ಲಘು ಉದ್ಯಮದ ಕನಸಿನೊಂದಿಗೆ ಮತ್ತೆ ಜೀವನ ಕಟ್ಟಿಕೊಳ್ಳಲು ಊರಿಗೆ ತೆರಳುವ ಆಶಾದಾಯಕ ಚಿತ್ರಣವಿದೆ.

ರೂಪಾಯಿಯ ರಾಜ ಮುದ್ರೆ ಮತ್ತು ಹುಚ್ಚು ಹುಡುಗಿ ಕಥೆಯಲ್ಲಿ ಗಿರೀಶ್ ಯಶಸ್ಸಿನ ಮೆಟ್ಟಿಲೇರುವಾಗ ಸಂಬಂಧಿಕರ ಮತ್ಸರದ ಮಾತಿಗೆ ಬಲಿಯಾಗುವ ಚಿತ್ರಣವಿದೆ. ಬಡತನದ ಕಾಲದಲ್ಲಿ ಸಹಾಯ ಮಾಡಿದ ಸಂಧ್ಯಾಳ ಅಪ್ಪನೊಂದಿಗೆ ಜಗಳವಾಡುತ್ತಾನೆ. ಊರಿನ ಆಸ್ತಿಯ ಪಾಲಿನಲ್ಲಾದ ಮೋಸದಿಂದ ಸಂಕಟಪಡುತ್ತಾನೆ. ತಂಗಿಯ ಮದುವೆಗೆ ಅವಸರಿಸುವ ಗಿರೀಶ. ತಂಗಿಯ ಅಂತರಾಳದ ಮಾತಿನಿಂದಾಗುವ

ನೋವು, ಅಮ್ಮನ ನೆನಪಿನೊಂದಿಗೆ ಕಣ್ಣೀರಿಡುತ್ತಾನೆ. ರೂಪಾಯಿಯ ದರ್ಪವನ್ನರಿಯದ ಮುಗ್ದ ಸಂಧ್ಯಾಳ ಚಿತ್ರಣವಿದೆ. ಕಥೆಗಾರರಿಗೆ ಬರಿನ ಜೀವನ ಕಾಡಿದ್ದು, ಅವಿಭಕ್ತ ಕುಟುಂಬದ ಸನ್ನಿವೇಶಗಳಿಂದ ಕಂಡುಬರುತ್ತದೆ.

ಕನ್ನಡಿಯಲ್ಲಿ ಕಂಡಂತೆ ಮುಂಬೈ ಜೀವನವನ್ನು ನಾಗೇಶ ಅನುಭವಿಸುವ ರೀತಿಯನ್ನು ವಾಸ್ತವದಂತೆ ಚಿತ್ರಿಸಿದ್ದಾರೆ. ಅಮ್ಮನಿಂದ ಬೈಯಿಸಿಕೊಂಡು ಅಪ್ಪನನ್ನು ಹುಡುಕುತ್ತ ಮುಂಬೈ ಸೇರುತ್ತಾನೆ. ಜಾನಕಿ ಟೀಚರ್ ಜತೆ ಅಪ್ಪ ಓಡಿ ಹೋದುದದ್ಕ್ಕೆ ಉತ್ತರ ಹುಡುಕುತ್ತಾನೆ. ಮುಂಬೈ ಜೀವನ ಕಲಿಸುವ ಸಂಯಮ ಮತತಲು ಸಹನಾಶಕ್ತಿ ನಾಗೇಶನಿಗೆ ಬೆರಗುಗೊಳಿಸುತ್ತದೆ. ಗೆಳೆಯ ವಸಂತನ ಸಂಘ ಸಂಸ್ಥೆಗಳ ಓಡಾಟ, ಹೊಟೇಲ್ ಉದ್ಯಮಿಯೋರ್ವನ ಭಾಷಣ, ಅದೇ ಹೊಟೇಲ್‌ನಲ್ಲಿ ಮಲೇರಿಯಾದಿಂದ ಮಲಗಿದ ನೌಕರನ ಚಿತ್ರಣ ವಾಸ್ತವಕ್ಕೆ ಹಿಡಿದ ಕನ್ನಡಿಯಂತಿದೆ. ಕಥೆಗಾರ ಇಲ್ಲಿ ಮುಂಬೈ ಜೀವನವನ್ನು ಹತ್ತಿರದಿಂದ ಕಂಡಿದ್ದನ್ನೇ ಚಿತ್ರಿಸಿದ್ದಾರೆ.

ಹತ್ತು ಮಂದಿ ಹಡೆದ ಕಥೆ ನಾಟಕ ಹುಚ್ಚಿನ ಶ್ರೀಧರನ ರಂಗ ಶಿಬಿರದಿಂದ ಪ್ರಾರಂಭವಾಗುತ್ತದೆ. ಕಥೆ ಹೆಣೆಯುವ ಶಿಬಿರದಲ್ಲಿ ಗೌಡ ಮತ್ತು ತುಕ್ರ ಆಳಿದ ಕಥೆಯೊಂದಿಗೆ ಬೆರೆಯುವ ಇನ್ನಿತರ ಸನ್ನಿವೇಶಗಳು ಕಥೇಯನ್ನು ಹತ್ತು ಮಂದಿ ಒಟ್ಟಾಗಿ ಸೇರಿ ಮುಗಿಸುವ ಯತ್ನವಿದೆ. ಆಫೀಸಿನ ಸಹೋದ್ಯೋಗಿ ರಾಧೆಯ ಸಲುಗೆ ಅವಳು ಹೆಣೆಯುವ ಸುಳ್ಳಿನ ಕಂತೆಗಳು ಶ್ರೀಧರನಿಗೆ ಕಥೆಯನ್ನು ಹೆಣೆದಂತೆ ಭಾಸವಾಗುತ್ತವೆ. ಶಿಬಿರದ ಕಥೆಗೆ ಮತ್ತಷ್ಟು ತಿರುವುಗಳು ಬಂದು ಸಮಾಧಾನದ ಮುಕ್ತಾಯ ಸಿಕ್ಕಾಗ ಶ್ರೀಧರ ನಿರಾಳನಾಗುತ್ತಾನೆ.

ಬೆಂಗಳೂರಿನಿಂದ ಮುಂಬೈಗೆ ಬಂದಿದ್ದ ಉದಯ ಮುಂಬಯಿಯ ಲೋಕಲ್ ಟ್ರೈನ್‌ನಲ್ಲಿ ಪಜೀತಿಗೊಳಗಾಗುವ ಪ್ರಸಂಗ 'ಉದಿಯಾನ ಕೆಂಪು ಕರ್ಚಿಪು' ಕಥೆಯಲ್ಲಿದೆ. ರೀನಾಳ ಹಣ ಮುಟ್ಟಿಸಲು ಹೋಗಿ ಹೀರಾ ಪನ್ನ ಮಾಲ್ ಕಾಂಪ್ಲೆಕ್ಸ್‌ನಲ್ಲಿ ಮೇಲ್ ಪ್ರೊಸ್ಟಿಟ್ಯೂಟ್ ಆಗಿ ಸಿರಿವಂತರ ಮನೆ ಸೇರುವ ಪ್ರಸಂಗ ತಮಾಷೆಯಾದರೂ ಐಶಾರಾಮದ ಜೀವನದ ಸಡ್ಡುಗಳನ್ನು ತೆರೆದಿಡುತ್ತವೆ. ಮಹೇಶ ತನ್ನ ಮಾತಿಗೆ ತಪ್ಪಿ ಆನಂದನ ತಂಗಿಯನ್ನು ಮದುವೆಯಾಗದೆ ಕುಷ್ಟುವಿನ ಮಗಳು ವೈಶಾಲಿಯನ್ನು ಮದುವೆಯಾಗುವ ಕಥೆ 'ಖರೀದಿ'ಯಲ್ಲಿದೆ. 'ಡಾಲರ್' ಮನುಷ್ಯನ ನಡವಳಿಕೆಯನ್ನು ಹೇಗೆ ಬದಲಿಸುತ್ತದೆ ಎಂದು ಚಿತ್ರಿಸುವಲ್ಲಿ ಕಥೇಗಾರ ಯಶಸ್ವಿಯಾಗಿದ್ದಾರೆ.

ನಾಯಕ ಸ್ವರ್ಗ ರೀತಿಯಲ್ಲಿ ತನ್ನ ಮೊದಲ ಪ್ರೀತಿಯನ್ನು ನೆನೆದು ಹತಾಶನಾಗುವ ಕಥೆ 'ಮಾತೋಡೋ ಮುದ್ದು ಗಿಣಿ' ಯಲ್ಲಿ ಸೊಗಸಾಗಿದೆ. ಸುಖ ದಾಂಪತ್ಯ ಜೀವನದಲ್ಲಿ ತೃಪ್ತಿಯನ್ನು ಕಂಡರೂ ಮರೆಯಲಾಗದ ಪ್ರೇಯಸಿಯ ನೆನಪು ನಾಯಕನನ್ನು ಕಾಡುತ್ತದೆ. ಉತ್ತರಾರ್ಧದಲ್ಲಿ ನಾಯಕಿ ಪ್ರಿಯಾ ದುಬೈಯಲ್ಲಿ ಕುಳಿತು ತನ್ನ ಜೀವನ ಬದಲಾದ ಕ್ರಮವನ್ನು ಹೇಳಿಕೊಳ್ಳುವ 'ಸ್ವರ್ಗ' ಶೈಲಿ ಇದೆ. ನಿರೂಪಣಾ ದೃಷ್ಟಿಯಿಂದ ಇದು ಸಂಕಲನ ಭಿನ್ನವಾದ ಕಥೆ. ಮುಂಬೈ ಜೀವನ ಹಾಸುಹೊಕ್ಕಾಗಿರುವುದು ಇಲ್ಲಿನ ಮತ್ತೊಂದು ವೈಶಿಷ್ಟ್ಯ.

ಹೀಗೊಂದು ಕಥೇಯಲ್ಲಿ ಪೋಸ್ಟ್ ಕಾರ್ಡಿನಲ್ಲಿ ಬರೆದ ಕಥೆಯನ್ನು ಓದಿ ಹೆಂಡತಿಯ ಸಂಶಯಕ್ಕೆ ಬಲಿಯಾಗುವ ನಾಟಕನ ಚಿತ್ರಣವಿದೆ. ಸಂಕಲನದ ಅತಿ ಸಣ್ಣ ಕಥೆ ಇದಾಗಿದೆ. ಮುಗ್ಧ ಮನಸ್ಸಿನ ಹುಡುಗಿ ಡಾ. ಶೆಟ್ಟರ ಕ್ಲಿನಿಕ್‌ನಲ್ಲಿ ತನ್ನ ಜೀವನವನ್ನು ರೂಪಿಸಿಕೊಳ್ಳುವ ಕಥೇ 'ಸುಹಾನ'. ನಿರೂಪಕನ ಅಚ್ಚುಮೆಚ್ಚಿನ ಎಳೆಯ ಗೆಳತಿಯಾದ ಸುಹಾನಳ ಮುಗ್ಧತೆ ಮುದ ನೀಡುತ್ತದೆ. ಅನೇಕ ವರ್ಷಗಳ ನಂತರ ಭೇಟಿಯಾದ 'ಸುಹಾನ'ನಲ್ಲಿ ಆದ ಬದಲಾವಣೆ ನಿರೂಪಕನಿಗೆ ಸಂತೋಷವನ್ನುಂಟುಮಾಡಿದರೂ ಸಂಕಟ ವ್ಯಕ್ತವಾಗುತ್ತದೆ. "ಇನ್ನಷ್ಟು ಮೈಕೈ ತುಂಬಿಕೊಂಡ ಸುಹಾನ ಇದ್ದಕ್ಕಿದ್ದಂತೆ ದೊಡ್ಡವಳಾದಂತೆ, ಅಪರಿಚಿತಳಾದಂತೆ ಕಂಡಳು" ಎಂಬ ಕೊನೆಯ ಸಾಲಿನಲ್ಲಿ ನಿರೂಪಕನ ನಿಟ್ಟುಸಿರು ಜೋಚರವಾಗುತ್ತದೆ.

ಈ ಕಥಾ ಸಂಕಲನದಲ್ಲಿರುವ ಎಲ್ಲಾ ಕಥೆಗಳು ಅನುಭವ ಕಥನಗಳಂತೆ ಗೋಚರವಾಗುತ್ತದೆ. ಹುಟ್ಟೂರು ಮತ್ತು ಜೀವನದಲ್ಲಿ ನಡೆಯುವ ಘಟನೆಗಳು ಪ್ರಧಾನ ವಸ್ತುಗಳಾಗಿ ಕಂಡು ಬಂದಿವೆ. ಪ್ರಥಮ ಪುರುಷ ನಿರೂಪಣೆ ಪ್ರಧಾನತೆಯೊಂದಿಗೆ ಇಲ್ಲಿನ ಕಥೆಗಳು ಸಾಗಿದೆ. 'ಆ ಕ್ಷಣದ ಸತ್ಯ' ಕತೆಯಲ್ಲಿ ಭಾವತೀರೇಕಕ್ಕೆ ಒಳಗಾದ ಕಥೆಗಾರ ನಂತರದ ಕಥೆಗಳಲ್ಲಿ ಲಘು ಹಾಸ್ಯ, ನೇರ ನಿರೂಪಣೆ, ಸರಳ ಭಾಷೆ, ಸರಳ ಕತೆ, ಲವಲವಿಕೆಯ ಸಂಭಾಷಣೆಗಳೊಂದಿಗೆ ಆಪ್ತತೆಯನ್ನು ತರುವುದರಲ್ಲಿ ಸಫಲವಾಗಿದ್ದಾರೆ. ಉದಯೋನ್ಮುಖ ಕತೆಗಾರ ಗೋಪಾಲ ತ್ರಾಸಿಯವರಿಂದ ಇನ್ನಷ್ಟು ಉತ್ತಮ ಕಥೆಗಳು ಬರಲಿ ಎಂದು ಆಶಿಸುತ್ತೇವೆ.



*- ಅಶೋಕ್ ಕುಮಾರ್ ವಳದೂರು (ಅಕುವ)*

**ಜೀವಿ ವಚನ**

# ಸತ್ಯಕ್ಕೆ ಹಲವು ಮುಖ

1

ಜನನ–ಮರಣ ಒಂದು ಚಕ್ರ, ಬಿಡಿಸಿಕೊಂಡವನೆ ಮುಕ್ತ.
ಮತ್ತೆ ಮತ್ತೆ ಹುಟ್ಟು ಇದೆ; ನಂಬಿದರೆ ನಂಬಿ, ನಂಬದಿದ್ದರೆ ಬಿಡಿ.
ಪುನರ್ಜನ್ಮ ಇದು ಜೀವಗಳ ಹಣೆಬರಹ, ಅಳಿಸಲಾಗದ ಸತ್ಯ.
ಅದನ್ನು ನೀವು ಸತ್ಯವೆಂದರೂ ಸತ್ಯ, ಮಿಥ್ಯೆ ಎಂದರೂ ಸತ್ಯ.
ಬುದ್ಧನಿಗಿತ್ತು ನೂರು ಜನ್ಮಗಳ ಸ್ಮರಣೆ, ನಮಗೆ ಇಲ್ಲ, ಇದೂ ಸತ್ಯ.

2

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವಚಾರ್ಜುನ ಎಂದ ಕೃಷ್ಣ.
ನರನದು ಮರುಹುಟ್ಟು, ಆದರೆ ನಾರಾಯಣನದು ಪುನರಾವತಾರ.
ಜನುಮಮರಣದ ಲೀಲೆ, ಎಲ್ಲದಕ್ಕೂ ಅವನೇ ಸೂತ್ರಧಾರ.
ಮತ್ತೆಮತ್ತೆ ಸಾಯುವ ಶರೀರ, ಬದಲುಮಾಡುವ ಹಳೆಯ ಬಟ್ಟೆ.
ಉಟ್ಟು ಹರಿಯುವ ದೇಹಕಾಗಿ ಯಾಕೆ ಶೋಕ, ಯಾಕೆ ಮೋಹ?

3

ಆದಿ ಗೊತ್ತಿಲ್ಲ, ಅಂತ ಗೊತ್ತಿಲ್ಲ; ಮಧ್ಯದಲ್ಲಿ ಇರುವದೇ ಜೀವನ.
ನಾ ತೊಟ್ಟ ದೇಹಗಳ ಲೆಕ್ಕ/ ಇಡುವವರ ಸೊಕ್ಕ/ ಯಮಃ ನೋಡಿ ನಕ್ಕ
ಎಂದು ಹಾಡಿದರು ಬೇಂದ್ರೆ: ಮುಗಿಯದ ಕಾಳಕ್ಕ/ ಜನುಮಗಳ ಮ್ಯಾಳಕ್ಕ/
ಕುಣಿಯೋಣು ಬಾ  ಎಂದು ಸಖಿಗೆ ಕರೆದ ವರಕವಿ ದತ್ತ. ನಿನ್ನೆಗಳ ಮರೆತು,
ನಾಳೆಗಳ ತೊರೆದು, ಇಂದು ಇರುವುದೇ ನಿಜ ಬಾಳುವೆಯ ಗುಟ್ಟು.

4

ಹುಟ್ಟದೇ ಇರುವವರು ಸಾಯುವುದೆ ಇಲ್ಲ, ಬರೆಯದ ಪುಸ್ತಕವ ಓದಿದವರಿಲ್ಲ.
ಜಾತಸ್ಯ ಮರಣಂ ಧ್ರುವಂ; ಹುಟ್ಟು ಎಷ್ಟು ಸತ್ಯವೋ ಸಾವೂ ಅಷ್ಟೇ ಸತ್ಯ.
ಮಧ್ಯದಲ್ಲಿರುವ ಬಾಳು ಕೂಡ ಸತ್ಯ, ಮಿಥ್ಯೆ ಎಲ್ಲಿದೆ ಹುಡುಕಲು?
ಸೋಹಂ ಎಂದರೆ ಅಹಂಕಾರ,  ಕೋಹಂ ಎಂದರೆ ಸಂಶಯ, ದಾಸೋಹಂ,
ಶಿಷ್ಯಸ್ತೇಹಂ  ಅನ್ನುವುದೇ ಕ್ಷೇಮ; ಮಾತುಕೊಡು, ಕರಿಷ್ಯೇ ವಚನಂ ತವ
ಎಂದು.



**_ ಡಾ। ಜೀವಿ ಕುಲಕರ್ಣಿ**

(M: 9324242172)

(ಸ್ವಾಮಿ ಜಗದಾತ್ಮಾನಂದರ 'ಬದುಕಲು ಕಲಿಯಿರಿ' ಅಧ್ಯಾ0ಯ ಐದರಿಂದ ಸ್ಫುರಿಸಿದ್ದು)

# ವೃದ್ಧಾಪ್ಯ - ವೃದ್ಧನೋರ್ವನ ಹರಟೆ !

ವೃದ್ಧಾಪ್ಯ ಒಂದು ಹಿಂಸೆ ತನಗೂ ಮತ್ತು ಇತರರಿಗೂ. ತಕ್ಕಮಟ್ಟಿಗೆ ಆರೋಗ್ಯವಾಗಿದ್ದಾಗ್ಯೂ ಸಹ. ಅದರಲ್ಲೂ ಯಾವುದಾದರೂ ಖಾಯಿಲೆ ಪೀಡಿತರಾಗಿದ್ದಲ್ಲಿ ಇಲ್ಲವೆ ಕಾರಣಾಂತರದಿಂದ ಅಂಗವಿಕಲನಾಗಿದ್ದಲ್ಲಿ ಜೀವನ ನರಕವೇ ಸರಿ. ವಯಸ್ಸು ಹೆಚ್ಚಿದಂತೆ ಸಹಜವಾಗಿ ದೌರ್ಬಲ್ಯ ಹೆಚ್ಚುತ್ತದೆ. ಅಧೀನತೆ ಹೆಚ್ಚುತ್ತದೆ. ಅಧೀನರಾಗಿರಬಾರದೆಂದು ಎಷ್ಟೋ ಜನ ಪ್ರಯತ್ನಿಸುತ್ತಾರೆ. ಸಹಕಾರ ನೀಡಲು ಬಂದವರಿಗೆ ವಿನಯದಿಂದ ನಿರಾಕರಿಸುತ್ತಾರೆ. ಆದರೆ, ಉದಾತ್ತ ಜನರು ಒಂದು ಒಳ್ಳೆಯ ಕಾರ್ಯ ಮಾಡೋಣವೆಂದು ಪ್ರತಿ ಹೆಜ್ಜೆಗೂ ಮುಂದೆ ಬರುತ್ತಾರೆ. ನಿರಾಕರಿಸುತ್ತಾ ಹೋಗುವುದು ಕಷ್ಟ. ಈ ಕಾರಣದಿಂದ ದೌರ್ಬಲ್ಯ ಹೆಚ್ಚುತ್ತದೆ. ನೀವು ಎಷ್ಟೇ ನಿಶ್ಚಲ ಮನಸ್ಸಿನವರಾದರೂ, ನೀವು ಮುದುಕರು, ನಿಶ್ಯಕ್ತರು ಎಂದು ಹೇಳಿ, ತೋರಿಸಿ, ನಿಮ್ಮನ್ನು ಇನ್ನಷ್ಟು ನಿರ್ಬಲರನ್ನಾಗಿ ಮಾಡುತ್ತಾರೆ. ಇಂತಹವರಲ್ಲಿ ಮನೆಯವರೆಲ್ಲಾ ಸೇರಿರುತ್ತಾರೆ. ಜೋಕೆ ಕೊನೆಗೆ ನೀವು ಹಾಸಿಗೆ ಹಿಡಿಯುತ್ತೀರಿ.

ಇಂತಹ ಸಂದರ್ಭದಲ್ಲಿ ನೀವು ಗಟ್ಟಿ ಮನಸ್ಸು ಮಾಡಿ ನೀವು ಹಾಕಿಕೊಂಡ ದಾರಿಯಲ್ಲಿ ನಡೆಯಿರಿ. ತಿಳಿಯಿರಿ ಈಗಿನ ಕಾಲದಲ್ಲಿ 60 ದಾಟಿದವರು ವೃದ್ಧರಲ್ಲ. 70 ದಾಟಿದವರೇ ಆ ವರ್ಗಕ್ಕೆ ಸೇರಿದವರು ಎಂದು ನನ್ನ ಗಣಿಕೆ. ದಾಟಿದವರು ಅಂದರೆ ನಿವೃತ್ತರೂ ಸಹ. ಎಚ್ಚರಿಕೆ ವಹಿಸಿ ತಮ್ಮ ಸ್ವಾಧೀನತೆಯನ್ನು ಕಾಪಾಡಿಕೊಂಡು ಮುಂದುವರಿಯಬೇಕು.

ವೃದ್ಧರಲ್ಲಿ ಎರಡು ಗುಂಪಿನವರೆನ್ನಬಹುದು. ವಯೋವೃದ್ಧರು ಮತ್ತು ಮನೋವೃದ್ಧರು. ವಯೋವೃದ್ಧರು ಸಹಜವಾಗಿಯೇ ವಯಸ್ಕರಾಗಿ, ಎಲ್ಲಾ ವಿಧಾನಗಳಲ್ಲೂ ತಮ್ಮ ಶಕ್ತಿಗಳನ್ನು ಕಳೆದುಕೊಂಡು ಜೀವನ ಸಾಗಿಸಿಕೊಂಡಿರುತ್ತಾರೆ. ಮನೋವೃದ್ಧರು ಹಾಗಲ್ಲ. ಇನ್ನೂ 60 ಮುಟ್ಟಿರುವುದಿಲ್ಲ ಮುದುಕರಾಗಿಬಿಟ್ಟಿರುತ್ತಾರೆ. ನನಗೆ ವಯಸ್ಸಾಯಿತು, ಮುದುಕನಾಗಿಬಿಟ್ಟೆ, ನನಗೆ ಅದು ಸಾಧ್ಯವಿಲ್ಲ, ಇದು ಸಾಧ್ಯವಿಲ್ಲ ಎಂದು ಗೊಣಗುತ್ತಿರುತ್ತಾರೆ. ಎದ್ದರೆ ಕೂತರೆ ಉಸ್ಸಪ್ಪ ಎಂದು ನಿಟ್ಟುಸಿರು ಬಿಡುತ್ತಾರೆ. ಜೊತೆಗೆ ನಿವೃತ್ತರೂ ಆಗಿಬಿಟ್ಟರೆ ಇನ್ನು ಕೊನೆಗಾಲವೇ ಬಂತೆಂದು ನರಳುತ್ತಾರೆ. ಇಂತಹವರೆಲ್ಲಾ ಈ ವಾಕ್ಯವನ್ನ ಪಠಿಸಿಕೊಳ್ಳುತ್ತಿರಬೇಕು.. "ನಾನು ಚಿಂತಿಸಿದಂತೆ ಮುದುಕ". ಅದಕ್ಕಿಂತ ಒಳ್ಳೆಯದು "ನಾನು ಚಿಂತಿಸಿದಂತೆ ಯುವಕ". ಆಮೇಲೆ ನೋಡಿ ಅದರ ಪರಿಣಾಮ. ಯುವಕರಂತೆ ನಡೆದುಕೊಳ್ಳಿ. ಅವರಂತೆಯೇ ಚಟುವಟಿಕೆ ಇಟ್ಟುಕೊಳ್ಳಿ. ಆಟಪಾಟಗಳಲ್ಲಿ ಭಾಗವಹಿಸಿ. ಪುಸ್ತಕಗಳನ್ನು ಓದಿ. ಆದರೆ, ಆರಿಸಿಕೊಂಡು ವಿಚಾರ ವಿನಿಮಯ ಉಳ್ಳ, ಜ್ಞಾನವನ್ನು ಹೆಚ್ಚಿಸುವ, ಸಂತೋಷಕಜನಕ ವಿಷಯಗಳುಳ್ಳ ಪುಸ್ತಕಗಳನ್ನು ಓದಿ. ಟೀವಿ ಕೂಡ ಹಾಗೆಯೇ. ಆರಿಸಿಕೊಂಡು ಉತ್ತಮ ಕಾರ್ಯಕ್ರಮಗನ್ನು ನೋಡಿ. ಆದರೆ, ಸೋಫಾ-ಸೋಮಾರಿ ಆಗಬೇಡಿ!. ನಿಮ್ಮ ಇಚ್ಛಾನುಸಾರ ಸಂಗೀತ ಕಾರ್ಯಕ್ರಮಗಳು, ನಾಟಕಗಳು, ಉಪನ್ಯಾಸಗಳು, ಚರ್ಚಾಕೂಟಗಳು ಇತ್ಯಾದಿಗಳಲ್ಲಿ ಭಾಗವಹಿಸಿ. ನಿಮಗೆ ಕಂಪ್ಯೂಟರ್ ಬಳಕೆ ಗೊತ್ತಿದ್ದರೆ ಮತ್ತೆ ಉಪಯೋಗಿಸುವ ಅನುಕೂಲ, ಅವಕಾಶವಿದ್ದರೆ ಬಲು ಚೆನ್ನ. ಅದರ ಸದುಪಯೋಗ ಮಾಡಿ. ನೀವು ನೆನೆಸಿಕೊಂಡ ಏನು ವಿಷಯವಿದ್ದರೂ ಅದನ್ನು ತೆರೆದು ನೋಡಿ ತಿಳಿದುಕೊಳ್ಳಬಹುದು. ಕಾಲಕ್ಷೇಪಕ್ಕೆ ಇದು ಒಂದು ಒಳ್ಳೆಯ ಸಾಧನೆ.

ನೀವು ನಿಮ್ಮ ವೃದ್ಧಾಪ್ಯ ಜೀವನವನ್ನು ಆರೋಗ್ಯಕರವಾಗಿ ಸುಖಮಯವಾಗಿ ಸದುಪಯೋಗಕರವಾಗಿ ಜೀವಿಸಬೇಕೆಂದರೆ ಮೊದಲಿನಿಂದಲೂ ಕೆಲವು ನಿಯಮಗಳನ್ನು ಪಾಲಿಸಬೇಕು. ಇದುವರೆಗೂ ಮಾಡಿಲ್ಲವೆಂದರೆ ನಿಮ್ಮ ಜೀವನ ವ್ಯರ್ಥವೇ ಆಯಿತೆನ್ನಿ. ಆದರೂ ಈಗಲಾದರೂ ಶುರು ಮಾಡಿಕೊಳ್ಳಿ. ಮುಖ್ಯವಾಗಿ ನಿಮ್ಮ ನಡತೆ ಮನೆಯಲ್ಲಿ, ಮನೆ ಹೊರಗೆ ಬಂಧುಗಳಲ್ಲಿ, ಮಿತ್ರರಲ್ಲಿ ಹೇಗಿರಬೇಕು? ನಿಮ್ಮ ಹತ್ತಿರ ಸಂಬಂಧಿಗಳಲ್ಲಿ, ಹೆಂಡತಿ, ಮಕ್ಕಳು, ಸೊಸೆಯಂದಿರ ಜೊತೆ ಹೇಗಿರಬೇಕು? ಎಂದು ತಿಳಿದುಕೊಳ್ಳಿ. ನಿಮ್ಮ ಜೀವನದಲ್ಲಿ ಬದಲಾವಣೆ ಆದಂತೆ ಅವರುಗಳು ನಿಮ್ಮೊಂದಿಗೆ ನಡೆದುಕೊಳ್ಳುವ ರೀತಿಯೂ ಬದಲಾಯಿಸುತ್ತದೆ. ಈ ಬದಲಾವಣೆಯಿಂದ ನೀವು ಬೇಸರಿಸುವುದು ಉಚಿತವಲ್ಲ. ಏಕೆಂದರೆ ಅದು ಸಹಜ. ಆ ವಿಷಯ ಚಿಂತಿಸಿ ಪ್ರಯೋಜನವಿಲ್ಲ. ಈ ಬದಲಾವಣೆಗಳಿಗೆ ನಿಮ್ಮ ನಡವಳಿಕೆ ತಿದ್ದಿಕೊಂಡು ಇರುವುದು ನಿಮಗೆ ಆರೋಗ್ಯಕರ ಮತ್ತು ಇತರರಿಗೆ ಸಂತೋಷಜನಕ!

ನಮ್ಮ ಸರಕಾರವೇನೋ ತಂದೆತಾಯಿಗಳ ರಕ್ಷಣೆಗಾಗಿ ಒಂದು ಕಾನೂನು ಜಾರಿಗೆ ತಂದಿದೆ. ಅದರಲ್ಲಿ, ಮಕ್ಕಳು ತಂದೆ ತಾಯಿರನ್ನು ರಕ್ಷಿಸಲೇಬೇಕೆಂದು ಕಡ್ಡಾಯ ಮಾಡಲಾಗಿದೆ. ಆದರೆ, ಪೋಷಕರು (ತಂದೆ ತಾಯಿಯರು) ಹೇಗೆ ನಡೆದುಕೊಳ್ಳಬೇಕು, ಸಹಕರಿಸಬೇಕು ಎಂದು ನಿರ್ದೇಶಿಸಿದ್ದಾರೋ ಇಲ್ಲವೋ ತಿಳಿಯದು. ಏನೇ ಆಗಲಿ ನಿಮ್ಮ ಒಳ್ಳೆಯದಕ್ಕೆ ನೀವು ಕೆಲವು ನಿಯಮಗಳನ್ನ ಪಾಲಿಸಬೇಕು. ನಿಮ್ಮ ಜೀವನದಲ್ಲಿ ನೀವು ಏನೇನೂ ಕಂಡಿರಬಹುದು, ಕಲಿತಿರಬಹುದು. ವೃದ್ಧಾಪ್ಯ ಜೀವನದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಸಹ ನೀವೇ ನಿರ್ಧರಿಸಿರಬೇಕು. ನಿಮ್ಮ ಆರ್ಥಿಕ ಪರಿಸ್ಥಿತಿ ನಿಮ್ಮನ್ನು ಪೋಷಿಸುವವರಿಗೆ (ಅಂದರೆ ಮಕ್ಕಳಿಗೆ) ತೊಂದರೆ ಆಗದಂತೆ ನೀವು ವ್ಯವಸ್ಥೆ ಮಾಡಿಕೊಂಡಿರಬೇಕು. ನಿಮ್ಮ ಆರ್ಥಿಕ ಪರಿಸ್ಥಿತಿಯಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಿನ ಮುಖ್ಯ ವಿಷಯವೆಂದರೆ ನಿಮ್ಮ ಆರೋಗ್ಯ. ಅದಕ್ಕಾಗಿ ನೀವು ಕೆಲವು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಮುಖ್ಯನಿಯಮಗಳಲ್ಲಿ ಇವೆರಡು.. 'ಸರಳ ಜೀವನ, ಮಿತ ಭೋಜನ'. ಇವುಗಳಿಂದ ವೈದ್ಯರನ್ನ ದೂರವಿಡಬಹುದು. ಖರ್ಚನ್ನು ತಹಬಂದಿಯಲ್ಲಿ ಇಡಬಹುದು. ಇದಕ್ಕಾಗಿ ವ್ಯಾಯಾಮ, ನಡಿಗೆ ಮತ್ತು ಯೋಗ ಅಭ್ಯಾಸ ಇಟ್ಟುಕೊಳ್ಳುವುದು ಅತಿ ಅವಶ್ಯಕ ಮತ್ತು ಉತ್ತಮ. ಈಗ ನೀವು ಗೃಹಸ್ಥಾಶ್ರಮ ಮುಗಿಸಿ ವಾನಪ್ರಸ್ಥಾಶ್ರಮದಲ್ಲಿ ಕಾಲಿಟ್ಟಿದ್ದೀರಿ. ಅಂದರೆ ತ್ಯಾಜ್ಯ ಮತ್ತು ಶುದ್ಧೀಕರಣ ಕಾಲ. ನಿಮ್ಮ ಆಸೆ ದುರಾಸೆಗಳನ್ನು ಬಿಟ್ಟುಬಿಡಿ. ಕಾಮ ಕ್ರೋಧ ಮೋಹಗಳನ್ನು ತ್ಯಜಿಸಿ. ವೈರ, ದ್ವೇಷಗಳನ್ನು ಮರೆತುಬಿಡಿ. ಇವುಗಳನ್ನು ಕಟ್ಟಿಕೊಂಡು ಪರಲೋಕದಲ್ಲಿ ಏನು ಮಾಡುವಿರಿ. ಇವೆಲ್ಲಾ ಮಾಡಿದರೆ ನಿಮ್ಮ ಮನಸ್ಸು ಶುದ್ಧವಾಗಿ ಸುಖ ಸಂತೋಷ ಉಂಟಾಗುತ್ತೆ. ಆಗ ನಿಮ್ಮ ಆತ್ಮೀಯರಲ್ಲಿ ನೆರೆಹೊರೆಯಲ್ಲಿಯೂ ಸಹ ಸುಖ ಸಂತೋಷ ಹರಡಬಲ್ಲಿರಿ. ನಗುನಗುತ್ತಾ ಮುಂದೆ ಸಾಗಿರಿ. ಸಾಗುತ್ತಿದ್ದಂತೆ ನೀವು ಅನುಕರಣೆಯಿಂದ ಏನೇನೋ ಕಲಿಯುತ್ತಿರುತ್ತೀರಿ. ಅದರಲ್ಲಿ ಎಷ್ಟೋ ಕಲಿಯಬಾರದ ನಡತೆಗಳನ್ನು ನಿಮ್ಮ ವಯಸ್ಕರಲ್ಲಿ ಕಾಣುತ್ತೀರಿ. ಅವುಗಳನ್ನೆಲ್ಲಾ ನೀವು ತ್ಯಜಿಸಿ. ಉದಾಹರಣೆಗೆ: ಮಕ್ಕಳು ಪರದೇಶದಲ್ಲಿದ್ದುಕೊಂಡು 2-3 ಕಾರುಗನ್ನು ಇಟ್ಟುಕೊಂಡು, ಬಂಗಲೆ ಕಟ್ಟಿಕೊಂಡು ಜೀವನ ನಡೆಸುತ್ತಿದ್ದರೆ ಪೋಷಕರು ನಮಗೂ ಹಾಗೆ ಅನುಕೂಲ ಮಾಡಿಕೊಡಲಿ ಎಂದು ಮಕ್ಕಳನ್ನು ಹಣಕ್ಕಾಗಿ ಪೀಡಿಸುತ್ತಾರೆ. ಅದು ತರವಲ್ಲ. ನೀವು ನಿಮ್ಮ ಹಾಸಿಗೆ ಇದ್ದಷ್ಟು ಕಾಲು ಚಾಚಿ. ಮೀರ ಬೇಡಿ. ಇನ್ನೊಂದು ನಮೂನೆ ಜನ. ಮಕ್ಕಳು ಅವರ ಕೆಲಸ ಕಾರ್ಯ ತಮ್ಮೆದುರಿಗೇ ಇರಬೇಕು. ಬೇರೆ

✍ ಶ್ರೀ.ನಂ. ಸೂರ್ಯ

ಊರಿನಲ್ಲೂ ಪರದೇಶದಲ್ಲೂ ಇದ್ದರೆ ಇಲ್ಲೇ ಏಕೆ ಬಂದು ಕೆಲಸ ಮಾಡಿಕೊಂಡಿರಬಾರದು ಎಂದು ವಾಗ್ವಾದ. ತಾವು ಇರುವ ಹಳ್ಳಿಯೋ ಊರೋ ಬಿಟ್ಟು ಹೋಗಲು ನಿರಾಕರಣೆ. ಇನ್ನೊಂದು ಸಂಸಾರ.. ತುಂಬಾ ಗಂಡು ಮಕ್ಕಳೂ ಹೆಣ್ಣು ಮಕ್ಕಳೂ ಇದ್ದಾಗ್ಯೂ ಸಹ ಯಾರಲ್ಲೂ ಹೋಗಿ ಇರಲು ಸಾಧ್ಯವಿಲ್ಲ. ಏಕೆಂದರೆ ಎಲ್ಲರಲ್ಲೂ ಜಗಳ. ಆದ್ದರಿಂದ ಮಕ್ಕಳಿಗೆ ಬಿಕ್ಕಟ್ಟು. ಇನ್ನೊಂದು ಉದಾಹರಣೆ.. ತುಂಬ ವಯಸ್ಸಾದ ಅಜ್ಜಿಯೊಬ್ಬರು ತಮ್ಮ ಜೀವಮಾನವೆಲ್ಲ ಸೊಸೆಯನ್ನು ಗೋಳಾಡಿಸುತ್ತಿದ್ದರಂತೆ. ಆ ದ್ವೇಷವನ್ನ ಇನ್ನೂ ಬಿಟ್ಟಿಲ್ಲ. ಈಗಲೂ ಸಹ ಬಂದವರ ಹತ್ತಿರವೆಲ್ಲ ಸೊಸೆಯ ಮೇಲೆ ದೂರು. ಆಕೆಯ ಹಿತೈಷಿಗಳು 'ರಾಮಾ ಕೃಷ್ಣ' ಅಂತ ಧ್ಯಾನಿಸುತ್ತಿರು ಅಂತ ಹೇಳಿದ್ದು ಆಕೆಯ ಕಿವಿಯ ಮೇಲೆ ಬಿದ್ದಂತೆ ಇಲ್ಲ. ಇಂತಹ ಉದಾಹರಣೆಗಳು ಅನೇಕ. ಹೀಗೇ ನಿಮ್ಮ ದೋಣಿ ಸಾಗಲಿ ದೂರ ತೀರವ ಸೇರಲಿ. ತೀರ ಸೇರಿದ ನಂತರ ಏನು ಎಂದು ನನ್ನನ್ನು ಕೇಳಬೇಡಿ. ಏಕೆಂದರೆ ನನಗೆ ಗೊತ್ತಿಲ್ಲ. ನನ್ನ ಅನಿಸಿಕೆಗಳೇ ಬೇರೆ, ನಿಮ್ಮದೇ ಬೇರೆ. ಇದು ಅವರವರ ನಂಬಿಕೆಗಳ ಮೇಲೆ ಹೋಗುತ್ತದೆ. ಆದ್ದರಿಂದ ನಿಮಗೇ ಬಿಟ್ಟಿದ್ದೇನೆ. ಈ ವಿಷಯ ನಿಮಗೆ ಖಚಿತವಾಗಿ ತಿಳಿದಿದ್ದರೆ ಅಥವಾ ತಿಳಿದರೆ ನನಗೂ ತಿಳಿಸಿ.

***ಸೂಚನೆ: ಇದು ಹೆಂಗಸರಿಗೂ ಮತ್ತು ಗಂಡಸರಿಗೂ ಅನ್ವಯಿಸುತ್ತದೆ.***

# ಸಾಹಿತ್ಯ ನಿರ್ಮಿತಿಯಲ್ಲಿ 'ಮಹಾಕೃತಿ'ಯ ಮಾನದಂಡ

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ರಂ.ಶ್ರೀ.ಮುಗಳಿ ಅವರು ಒಬ್ಬರು. ಇವರ ಪೂರ್ಣ ಹೆಸರು ಡಾ.ರಂಗನಾಥ ಶ್ರೀನಿವಾಸ ಮುಗಳಿ. 'ರಸಿಕರಂಗ' ಇದು ಅವರ ಕಾವ್ಯನಾಮ. ಕವಿಯಾಗಿ, ಕಥೆಗಾರರಾಗಿ, ನಾಟಕಕಾರರಾಗಿ, ವಿಮಶಆಗಿ ವಿದ್ವಾಂಸರಾಗಿ, ರಂ.ಶ್ರೀ.ಮುಗಳಿ ಅವರ ಸಾಹಿತ್ಯ ಸೇವೆ ವೈವಿಧ್ಯಮಯವಾದದು. ಮೂವತ್ತೇಳಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ ಮುಗಳಿ ಅವರು 'Heritage of Karnataka' ಎಂಬ ಇಂಗ್ಲೀಷ್ ಗ್ರಂಥ ಬರೆದು ಕರ್ನಾಟಕ ಸಾಹಿತ್ಯ ಸಾಂಸ್ಕೃತಿಕ ಪರಂಪರೆಯನ್ನು ವಿಶ್ವಕ್ಕೆ ಪರಿಚಯಿಸಿಕೊಟ್ಟಿದ್ದಾರೆ. ಕರ್ನಾಟಕ – ಮಹಾರಾಷ್ಟಗಳ ಗಡಿನಾಡಿನ ಸಾಂಗಲಿಯ ಮುಗಳಿಯವರು 'ಗಡಿನಾಡಿನ ಕನ್ನಡ ದೀಪ', 'ಕನ್ನಡ ಪಾರಿಜಾತ' ಎಂಬ ಬಿರುದುಗಳನ್ನು ಪಡೆದುಕೊಂಡು ಸಾರ್ಥಕ ಬದುಕನ್ನು ಬಾಳಿದ್ದಾರೆ.

'ಮಹಾಕೃತಿ' ಇದು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ ಎರಡನೆಯ ಕೃತಿಯಾಗಿ ಪ್ರಕಟಗೊಂಡಿದೆ. ಡಾ.ರಂ.ಶ್ರೀ.ಮುಗಳಿ ಅವರು 'ಮಹಾಕೃತಿ' ಎಂಬ ವಿಷಯ್ ಅಕುರಿತು ಉಪನ್ಯಾಸಗಳನ್ನು ನೀಡಿದ್ದರು. ಆ ಉಪನ್ಯಾಸ ಲೇಖನಗಳನ್ನು 1986 ರಂದು ಕೃತಿರೂಪದಲ್ಲಿ ಹೊರತರಲಾಗಿದೆ. ಸಾಹಿತ್ಯ ಪ್ರಪಂಚದಲ್ಲಿ ಯಾವುದಕ್ಕೆ ಮಹಾಕೃತಿ ಎನ್ನಬೇಕು? ಈ ಪ್ರಶ್ನೆಗೆ ಉತ್ತರವನ್ನು ಇಲ್ಲಿಯ ಲೇಖನಗಳಲ್ಲಿ ಕಂಡುಕೊಳ್ಳಲಾಗಿದೆ. ಮಹಾಕೃತಿ ಎಂಬ ಪರಿಕಲ್ಪನೆ ಸಾವಿರಾರು ವರ್ಷಗಳಿಂದಲೇ ಬಂದಿದೆ. ಅದು ಎಲ್ಲ ದೇಶಗಳಲ್ಲಿ ಸೌಂದರ್ಯರಾಧಕರ ಮತ್ತು ತತ್ವಜ್ಞಾನಿಗಳ ಬರಹಗಳಲ್ಲಿ ಆಕಾರ ತಾಳಿದೆ. ಇಲ್ಲಿ ಸೋದಾಹರಣವಾಗಿ ವಿವರಿಸಿ ಹೇಳಿದ್ದಾರೆ. ಪ್ರಸ್ತುತ ಗ್ರಂಥದಲ್ಲಿ ಹತ್ತು ಪ್ರಕರಣಗಳಿವೆ.

ಒಂದನೆಯ ಪ್ರಕರಣದಲ್ಲಿ ಮಹಾಕೃತಿ ಮತ್ತು ಮಹಾಕಾವ್ಯ ಇವುಗಳ ಸ್ವರೂಪ ಮತ್ತು ವ್ಯಾಪ್ತಿಗಳನ್ನು ತಿಳಿಸಲಾಗಿದೆ. ಎರಡನೆಯ ಪ್ರಕರಣದಲ್ಲಿ ಮಹಾಕೃತಿ ರಚನೆಗೆ ಅವಶ್ಯವಾದ ಸನ್ನದ್ಧತೆ ಏನು? ಅದು ಬೇರೆ ಬೇರೆ ಗಾತ್ರ, ಪ್ರಕಾರ ಮತ್ತು ಆಕೃತಿಗಳಿಗೆ ಬೇರೆ ಬೇರೆಯಾಗಿರುವುದೇ ಎಂಬುದನ್ನು ಕುರಿತು ಚರ್ಚೆ ನಡೆಸಲಾಗಿದೆ. ನಮ್ಮ ಲಕ್ಷಣ ಗ್ರಂಥಗಳಲ್ಲಿ ಬಂದಿರುವ ಕಾವ್ಯ ಹೇತುಗಳೆಲ್ಲ ಪರಂಪರೆಯ ಪ್ರಭಾವದಿಂದ ರೂಪಿತವಾದವುಗಳಾಗಿವೆ. ಅವುಗಳಲ್ಲಿ ಪ್ರತಿಭೆಯು ಒಂದು. ಮಹಾಕವಿಗೆ ಮಹಾಕಾವ್ಯ ಅಥವಾ ಮಹಾಕೃತಿ ರಚಿಸುವಲ್ಲಿ ಪ್ರತಿಭೆಯು ಬಹಳ ಮುಖ್ಯವಾದುದು. 'ನವ ನವೋನ್ಮೇಷಶಾಲಿನಿಯಾದ ಪ್ರಜೆಯೇ ಪ್ರತಿಭೆ' ಎಂಬ ಸೂತ್ರವೂ ಇದೆ. ಹೊಸ ಹೊಸ ಭಾವಗಳನ್ನು ಸತತವಾಗಿ ಕಾಣುವ, ಕಟ್ಟುವ ಪ್ರಜ್ಞೆಯೇ ಪ್ರತಿಭೆ. ಈ ಪ್ರತಿಭೆಯಿಂದ ಕವಿ ತನ್ನ ಕಾವ್ಯವನ್ನು ಜೀವ ತುಂಬಿ ವರ್ಣಿಸಬಲ್ಲನು, ರಚಿಸಬಲ್ಲನು. ಕವಿ ಕರ್ಮವೇ ಕಾವ್ಯ, ಅಪೂರ್ವ ವಸ್ತು ನಿರ್ಮಾಣ ಸಾಮರ್ಥ್ಯ ಎಂದೂ ಪ್ರತಿಭೆಯನ್ನು ವರ್ಣಿಸಲಾಗಿದೆ. ಇಲ್ಲಿ ಪ್ರತಿಭೆಯ ಲಕ್ಷಣವೇನು? ಪ್ರತಿಭೆಯ ಪ್ರಕಾಶಕ್ಕೆ ಅವಶ್ಯವಾದ ಇತರ ಪರಿಕರಗಳು ಯಾವವು ಹಾಗೂ ಮಾಡಬೇಕಾದ ಪರಿಶ್ರಮಗಳ ಕುರಿತು ವಿವರವಾಗಿ ಇಲ್ಲಿ ತಿಳಿಸಿದ್ದಾರೆ.

ಮೂರನೆಯ ಪ್ರಕರಣದಲ್ಲಿ ಮಹಾಕೃತಿ ರಚನೆಯಲ್ಲಿ ವ್ಯಕ್ತಿತ್ವದ ಮಹತ್ವವನ್ನು ಹೇಳಲಾಗಿದೆ. ಇಲ್ಲಿ ಲೇಖಕರು ಮಹಾವ್ಯಕ್ತಿತ್ವದಿಂದಲೇ ಮಹಾಕೃತಿ ನಿರ್ಮಾಣವಾಗುತ್ತದೆ ಎಂದು ತಿಳಿಯಬೇಕಾಗಿಲ್ಲ ಎಂದಿದ್ದಾರೆ. ಕ್ವಚಿತವಾಗಿ ಎದ್ದು ಕಾಣುವ ಅಥವಾ ನಮಗೆ ತಿಳಿದಿರುವ ಯಾವುದೇ ಸಾಧನೆ ಇಲ್ಲದೆಯೂ ಮಹಾಕೃತಿ ಹುಟ್ಟಬಹುದು ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಐದನೆಯ ಪ್ರಕರಣದಲ್ಲಿ ಪ್ರಾಚೀನ ಭಾರತೀಯ ಪರಂಪರೆಯಲ್ಲಿ ಮಹಾಕೃತಿಯ ಮಾನದಂಡಗಳ ಚಿಂತನೆ ನಡೆಸಲಾಗಿದೆ. ಭಾರತೀಯ ಪರಂಪರೆಯಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಸತ್ಕೃತಿ, ಮಹಾಕೃತಿಗಳ ಸ್ವರೂಪದ ಉಲ್ಲೇಖಗಳಿವೆ. ವೇದೋಪನಿಷತ್ತುಗಳಲ್ಲಿ ಅದರ ಸುಳಿವು ದೊರೆಯುತ್ತದೆ. ಆದರೂ ಇಲ್ಲಿ ಸ್ಪಷ್ಟವಾದ ಖಚಿತತೆ ಇಲ್ಲ. 'ಶೋಕವು ಶ್ಲೋಕತ್ವವಾಗಿ ಪರಿಣಮಿಸಿತು' ಎಂಬ ಮಾತು ರಘುವಂಶದಲ್ಲಿ ಬಂದಿದೆ. ಕ್ರೌಂಚಪಕ್ಷಿಗಳ ಜೋಡಿಯಲ್ಲಿ ಗಂಡು ಪಕ್ಷಿಯನ್ನು ಬೇಡನು ಬಾಣದಿಂದ ಕೊಲ್ಲುವನು. ಇದನ್ನು ನೋಡಿ ವಾಲ್ಮೀಕಿ ಮುನಿಗಳಿಗೆ ಕಾರುಣ್ಯ ಹುಟ್ಟಿ, 'ಮಾ ನಿಷಾದ' ಎಂಬ ಶ್ಲೋಕ ರೂಪದಲ್ಲಿ ಅವರ ವಾಣಿ ಹೊರಹೊಮ್ಮಿತ್ತು. ಅವರ ಶ್ಲೋಕವು ಹೀಗೆ ಶ್ಲೋಕ ರೂಪವನ್ನು ಪಡೆದು ರಾಮಾಯಣದ ರಚನೆಯಾಯಿತು. ತನ್ನದಲ್ಲದ ಶ್ಲೋಕವನ್ನು ತನ್ನದಾಗಿ ಮಾಡಿಕೊಂಡು ಸೂಕ್ಷ್ಮಸಂವೇದಿಯಾದ ಕವಿ ತೀವ್ರವಾಗಿ ಅದಕ್ಕೆ ಸ್ಪಂದಿಸಲು ಒಂದು ಮಹಾಕೃತಿಯ ಜನಕ್ಕೆ ಅದು ನಾಂದಿಯಾಯಿತು ಎಂದು ಲೇಖಕರು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

ಕ್ರಿ.ಪೂ. 5 6 ನೆಯ ಶತಕದಿಂದಲೇ ಗ್ರೀಕ್ ಪರಂಪರೆ ಪಾಶ್ಚಾತ್ಯ ಕಾವ್ಯಮೀಮಾಂಸೆಗೆ ಒಂದು ದೊಡ್ಡ ಪ್ರೇರಕ ಶಕ್ತಿಯಾಗಿದೆ. ಎಲ್ಲ ಸಾಹಿತ್ಯಿಕ ಚಿಂತನೆಗಳಿಗೆ ಮೂಲ ಪ್ರೇರಣೆ ಗ್ರೀಕ್ ದೇಶದ ಕಾವ್ಯ ಮೀಮಾಂಸೆ. ಸಾಕ್ರೆಟಿಸ್ಸಿನಿಂದ ಹರಿದು ಬಂದ ಸತ್ಯದ ಮೂಲ ಶೋಧದ ಝರಿ ಅದು ಇತರ ಕವಿ ನಾಟಕಕಾರರಲ್ಲಿಯೂ, ಚಿಂತಕರಲ್ಲಿಯೂ ಮಹಾಪ್ರವಾಹವಾಗಿ ಹರಿಯಿತು. ಅರಿಸ್ಟೋಪೆನಿಸ್ ಎಂಬ ವಿನೋದಿ ನಾಟಕಕಾರನು ತನ್ನ ಒಂದು ವಿನೋದಿಕೆಯಲ್ಲಿ ಸಾಹಿತ್ಯದ ಹಿರಿಮೆಯ ಮಾನದಂಡವನ್ನು ತಿಳಿಸಿದ್ದಾನೆ. ಅದಕ್ಕೆ ಅವನು ಈಸ್ಕಿಲಸ್ ಮತ್ತು ಯುರಿಪಿಡೀಸರ್ ಕುರಿತು ಹೀಗೆ ಹೇಳುತ್ತಾನೆ. "ಯುರಿಪೀಡಿಸಿನಲ್ಲಿ ಕಲೆಗಾರಿಕೆ ಇದ್ದರೂ ಜನರನ್ನು ಮೇಲಕ್ಕೆತ್ತುವ ಸಾಮರ್ಥ್ಯವಿಲ್ಲ; ಈಸ್ಕಿಲಸಿನಲ್ಲಿ ಕಲೆಗಾರಿಕೆ ಸಂಬಂಧಿಸಿದ ಹಾಗೆ ಕೊರತೆಗಳಿದ್ದರೂ ಅಥೆನ್ಸ್ ರಾಷ್ಟ್ರವನ್ನು ಒಂದು ಕಾಲಕ್ಕೆ ಘನತೆಗೇರಿಸಿದ ವೀರ ಪೌರುಷ, ನಿಷ್ಠೆಗಳಂತ ಸದ್ಗುಣಗಳನ್ನು ಆತನ ಕೃತಿಗಳು ಬೋಧಿಸುತ್ತವೆ. ಅದ್ದರಿಂದ ಆತನೇ ಹಿರಿಯ ಕವಿ ಎಂಬ ತೀರ್ಮಾನ ಅನಿವಾರ್ಯವಾಗುತ್ತದೆ" ಎಂದು ಹೇಳುತ್ತಾನೆ. ಇಲ್ಲಿ ಕೃತಿಯ ಹಿರಿಮೆಗೆ ಕಲೆಗಾರಿಕೆಗಿಂತ ಸತ್ಪ್ರೇರಣೆಗೆ ಮುಖ್ಯವಾದ ಮಾನದಂಡವೆಂದು ತಿಳಿಯಲಾಗಿದೆ. ಇದನ್ನೇ ಪ್ಲೋಟೋ ತನ್ನ 'ರಿಪಬ್ಲಿಕ್' ಎಂಬ ಗ್ರಂಥ ದ ಕಲಾತತ್ವ ಎಂಬ ಕೊನೆಯ ಪ್ರಕರಣದಲ್ಲಿ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಪ್ಲೋಟೋನ ನಂತರ ಅವನ ಶಿಷ್ಯನಾದ ಅರಿಸ್ಟಾಟಲ್ ಗುರುವಿನ ಕಲಾತತ್ವವನ್ನು ತನ್ನದೆ ಆದ ಮಾನದಂಡಗಳಿಂದ ನಿರ್ವಚಿಸಿದ್ದಾನೆ. ಅವನು ಕಲಾತ್ಮಕ ಪ್ರಕ್ರಿಯೆ ಅಡಿಪಾಯದ ಮೇಲೆ ಕಾವ್ಯಮೀಮಾಂಸೆಯನ್ನು ನಿಲ್ಲಿಸಿದನು. ಅವನ ಪ್ರಭಾವವು ಮುಂದಿನ ಕಾಲದ ವಿಮರ್ಶೆಯ ಮೇಲೆ ಗಾಢವಾಗಿ ಆಯಿತು ಎಂಬುದು ಮಾತ್ರ ಸತ್ಯ. ಹೀಗೆ ಮಹಾಕೃತಿಯ ಮಾನದಂಡವನ್ನು ಪ್ರಾಚೀನ ಪಾಶ್ಚಾತ್ಯದ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಏಳನೆಯ ಪ್ರಕರಣದಲ್ಲಿ ಮಹಾಕೃತಿಯ 'ಅರ್ವಾಚೀನ ಪಾಶ್ಚಾತ್ಯ' ಮತ್ತು ಎಂಟನೆಯ ಪ್ರಕರಣದಲ್ಲಿ ಮಹಾಕೃತಿಯ 'ಅರ್ವಾಚೀನ ಭಾರತೀಯ' ಶೀರ್ಷಿಕೆಗಳಲ್ಲಿ ಕೆಲವು ಪ್ರಮುಖ ಸಾಹಿತ್ಯ ಶಾಸ್ತ್ರಜ್ಞರ ಅಭಿಪ್ರಾಯಗಳಿಂದ ಮಹಾಕೃತಿಯ ಮಾನದಂಡವನ್ನು ವಿಶ್ಲೇಷಿಸಲಾಗಿದೆ. ಕೊನೆಯ ಪ್ರಕರಣದಲ್ಲಿ ಮಹಾಕೃತಿ ಇದು ಸತ್ಕೃತಿಯ ಉನ್ನತ, ಉತ್ಕಟರೂಪದ ನಿರ್ಮಿತಿ ಎಂಬ ಉತ್ತರವನ್ನು ಕಂಡುಕೊಳ್ಳಲಾಗಿದೆ. ಸತ್ಕೃತಿ, ಮಹಾಕೃತಿ, ಮೇರುಕೃತಿ ಈ ಮೂರು ಸಾಹಿತ್ಯ ನಿರ್ಮಿತಿಯ ಪ್ರಪಂಚದಲ್ಲಿ ಪರ್ವತ ಶಿಖರಗಳಂತಿರುತ್ತವೆ. ಮಹಾಕೃತಿಯ ಉದ್ದೇಶ ಮಾತ್ರ ಮಾನವ ಕಲ್ಯಾಣ ಮತ್ತು ವಿಶ್ವಪ್ರಜ್ಞೆಯನ್ನು ಒಳಗೊಂಡಿರಬೇಕು. ಆಗ ಮಾತ್ರ ಅದು ವಿಶ್ವಸಾಹಿತ್ಯಕ್ಕೆ ಒಂದು ಕೊಡುಗೆಯಾಗಿ ಮಹತ್ವ ಪಡೆದುಕೊಳ್ಳುತ್ತದೆ.

ದುರ್ಗಪ್ಪ ಯ. ಕೋಟಿ
9594335181

(ಕಳೆದ ಸಂಚಿಕೆಯಿಂದ)

# ಶ್ರೀ ಅಷ್ಟವಿನಾಯಕ ದರ್ಶನ

**ಅರ್ಥ** - ತಾವು ಮಣಿ ರೂಪ ಮತ್ತು ಚೈತನ್ಯ ರೂಪನೂ ಆಗಿದ್ದೀರಾ. ತಾಃವು ಆನಂದಮಯರು. ತಾವು ಸತ್, ಚಿತ್ ಮತ್ತು ಆನಂದಕ್ಕಿಂತಲೂ ಅದ್ವಿತೀಯರು ಅಂದರೆ ಸಚ್ಚಿದಾನಂದ ಸ್ವರೂಪರು. ತಾವು ಸ್ವತಃ ಬ್ರಹ್ಮರು. ತಾವು ಜ್ಞಾನಮಯ ಮತ್ತು ವಿಜ್ಞಾನಮಯರೂ ಆಗಿದ್ದೀರ.

ಸರ್ವ ಗಜದಿದಂತ್ವತೋ ಜಾಯತೆ| ಸರ್ವಜಗದಿದಂತ್ವತ್ತಸ್ತಿಷ್ಮತಿ||
ಸರ್ವ ಜಗದಿದಂ ತ್ವಯಿ ಲಲಯಮೇಷ್ಯತಿ| ಸರ್ವ ಜಗದಿದಂ ತ್ವಯಿ ಪ್ರತ್ಯೇತಿ||
ತ್ವಂ ಭೂಮಿ ರಾಪೋನಲೋ ನಿಲೋನಭಃ| ತ್ವಂ ಚತ್ವಾರಿ ವಾಕ್‌ಪದಾನಿ||

**ಅರ್ಥ** - ಈ ಜಗವು ನಿಮ್ಮಿಂದಲೇ ಅಂತ್ಯಗೊಳ್ಳುತ್ತದೆ, ನಿಮ್ಮಲ್ಲೇ ಈ ಸಂಸಾರದ ಅನುಭವವಾಗುತ್ತದೆ. ಭೂಮಿ, ನೀರು, ವಾಯು, ತೇಜ, ಮತ್ತು ಆಕಾಶ ಈ ಪಂಚ ಮಹಾ ತತ್ತ್ವಗಳೂ ನೀವೇ ಆಗಿದ್ದೀರಿ. ಪಣಪಶ್ಯಂತಿ, ವೈಖರೀ, ಈ ವಾಣಿಯ ನಾಲ್ಕು ಸ್ಥಾನಗಳೂ ನೀವೇ ಆಗಿದ್ದೀರ.

ತ್ವಂ ಗುಣತ್ರಯಾತೀತ| ತ್ವಮವಸ್ಥಾತ್ರಯ ತೀತ||
ತ್ವಂ ದೇಹತ್ರಯಾತೀತಃ| ತ್ವಂ ಕಾಲತ್ರಯಾತೀತಹಃ||
ತ್ವಂ ಮೂಲೋಧಾರ ಸ್ಥಿತೋಸಿ ನಿತ್ಯಂ| ತ್ವಂ ಶಕ್ತಿತ್ರಯಾತ್ಮಕಃ||
ತ್ವಾಂ ಯೋಗಿನೋ ಧ್ಯಾಯಂತಿ ನಿತ್ಯಂ| ತ್ವಂ ಬ್ರಹ್ಮಾ ತ್ವಂ ವಿಷ್ಣುಸ್ತವಂ ರುದ್ರಸ್ತವಂ| ಇಂದ್ರಸ್ತವಂ ಅಗ್ನಿಸ್ತವಂ ವಾಯುಸ್ತವಂ ಸೂರ್ಯಸ್ತವಂ ಚಂದ್ರಮಾಸ್ತವಂ ಬ್ರಹ್ಮ ಭೂರ್ಭುವಃ ಸ್ವರೋ||

**ಅರ್ಥ** - ನೀವು ತ್ರಿಗುಣಳಿಂದಲೂ ಆಚೆ ಇದ್ದೀರ, ನೀವು ಮೂರು ಅವಸ್ಥೆಗಳಿಂದಲೂ ಆಚೆ ಇದ್ದೀರ. ನೀವು ಈ ನಶ್ವರ ದೇಹದ ಮೂರು ಅವಸ್ಥೆಗಳಿಂದಲೂ ಆಚೆ ಇದ್ದೀರಾ, ವರ್ತಮಾನ, ಭೂತ, ಮತ್ತು ಭವಿಷ್ಯ ಈ ಸಮಯಗಳ ಅವಸ್ಥೆಗಳಿಂದಲೂ ಹೊರತಾಗಿದ್ದೀರ. ಮೂರು ಶಕ್ತಿಗಳೂ ನಿಮ್ಮದೇ ರೂಪವಾಗಿದೆ. ಜೀವನದಿಂದ ಮುಕ್ತಿ ಪಡೆಯುವ ಯೋಗಿಗಳು ನಿರಂತರ ನಿಮ್ಮನ್ನೇ ಧ್ಯಾನಿಸುತ್ತಾರೆ. ಸೃಷ್ಠಿಕರ್ತ ಬ್ರಹ್ಮನೂ ನೀವೇ, ಸೃಷ್ಠ ಪಾಲಕ ವಿಷ್ಣುವೂ ನೀವೇ, ಸೃಷ್ಠಿಹಾರಕ ರುದ್ರನೂ ನೀವೇ, ತ್ರಿಭುವನದ ಅಧಿಪತಿ ಇಂದ್ರನೂ ನೀವೇ. ನೀವೇ ಅಗ್ನಿ, ನೀವೇ ವಾಯು, ನೀವೇ ಸೂರ್ಯ ದೇವನು. ಚಂದ್ರದೇವನೂ ನೀವೇ, ನೀವು ಶಾಶ್ವತ ಮತ್ತು ಅವಿನಾಶಿ ಬ್ರಹ್ಮನೂ ಆಗಿದ್ದೀರ. ಪೃಥ್ವಿ, ಅಂತರಿಕ್ಷ ಮತ್ತು ಪಾತಾಳವೂ ನೀವೇ, ಓಂಕಾರವೂ ನಿಮ್ಮ ಸ್ವರೂಪವೇ ಆಗಿದೆ.

ಗಣಾದಿಂ ಪೂರ್ವ ಮಿಚ್ಚಾರ್ಯ ವರ್ಣಾದಿಂ ತದನಂತರಂ|
ಅನುಸ್ವಾರಃ ಪರತರಃ ಅರ್ಧೇಂದು ಲಸಿತಮ|
ತಾರೇಣ ಋದ್ದಮಃ| ಏತತ್ಕೃತವ ಮನುಸ್ವರೂಪಂ|
ಗಕಾರಃಪೂರ್ವ ರೂಪಂ| ಅಕಾರೋ ಮಧ್ಯಮ ರೂಪ|
ಅನುಸ್ವಾರ ಶಾಂತ ರೂಪಂ| ಬಿಂದುರೊತ್ತರ ರೂಪಂ|
ನಾದ ಸಂಧಾನಂ ಸಂಹಿತಾ ಸಂಧಿಃ||
ಸೈಷಾ ಗಣೇಶ ವಿದ್ಯಾ| ಗಣಕ ಋಷಿ| ನಿಚ್ರು ದಾಯತ್ರಿ ಛಂದಃ ಗಣಪತಿರ್ದೇವತಾ ಓಂ ಗಣಪತೆಯೇ ನಮಃ || ೭ ||

**ಅರ್ಥ** - ಗಣ ಶಬ್ದದ ಆದಿ ವರ್ಣ 'ಗ' ಕಾರದ ಪ್ರಥಮ ಉಚ್ಚಾರಣೆ ಮಾಡಿರಿ. ವರ್ಣ ಎಂದರೆ ಅಕ್ಷರ. ಅದರಲ್ಲಿ ಮೊದಲನೇ ವರ್ಣ 'ಅ' ಇದೆ. ಈ 'ಅ' ಕಾರವನ್ನು 'ಗ' ನಂತರ ಉಚ್ಚರಿಸಿರಿ. ಅದಾದ ನಂತರ ಅನುಸ್ವಾರ. ಈ ಅನುಸ್ವಾರವು ಅರ್ಧ ಚಂದ್ರನ ರೂಪದಲ್ಲಿರಲಿ. ಈ ರೀ 'ಗ' ಈ ಶಬ್ದ ಸಿದ್ಧವಾಯಿತು. 'ಓಂ' ಪ್ರಣಾಕ್ಷರು 'ಗ' ಅಕ್ಷರದಿಂದ ಮಿಲಿತವಾಗಿದೆ. ಈ ಪ್ರಕಾರ ಓಂ 'ಗ'ಈ ಮಂತ್ರಾಕ್ಷರವು ಸಿದ್ಧವಾಯಿತು. ಹೇ ಭಗವಂತನೇ 'ಓಮ ಸೆ' ಇದು ನಿಮಗೆ ಸರ್ವಶ್ರೇಷ್ಠ ಏಕಾಕ್ಷರದ ಮಂತ್ರದ ಸ್ವರೂಪವಾಗಿದೆ. 'ಗ' ಇದರ ಮೊದಲನೆ ಅ ಕಾರ ಇದು ಮಧ್ಯಮ ರೂಪ ಎಂದರೆ ಅ ಮಧ್ಯಮ ವರ್ಣ ಮಧ್ಯಮ ವರ್ಣ ಮತ್ತು ಅನುಸ್ವಾರ. ಇದು ಅಂತ್ಯರೂಪವೆಂದರೆ ಕೊನೆಯಲ್ಲಿದೆ. ಮತ್ತು ಅಂತ್ಯದಲ್ಲಿ ಅನುನಾಸಿಕ ಚಿನ್ಹೆಯಾಗಿದೆ. ಈ ನಾಲ್ಕು ವರ್ಣಗಳನ್ನು ಒಂದು ಮಾಡುವ ಒಂದು ನಾದದಂತಹ ಸ್ವರವಾಗಿದೆ. ಈ ರೀತಿ ಓಂ ಗಂ ಇದು ಗಣೇಶ ವಿದ್ಯೆಯಾಗಿದೆ. ಗಣಕ ಈ ವಿದ್ಯೆಯ ಜ್ಞಾನದ ಋಷಿ ಆಗಿದ್ದು, ವಿಚೈದ ಗಾಯತ್ರೀ ಇಲ್ಲಿ ಧಂದವಾಗಿದೆ. ಮತ್ತು ಗಣಪತಿ ಈ ಮಂತ್ರದ ದೇವತೆ ಆಗಿದ್ದು ಓಮ ಗಂ ಇದು ಮಂತ್ರ. ಈ ಮಂತ್ರದ ರೂಪ ಗಣಪತಿಗೆ ನನ್ನ ನಂಸ್ಕಾರ ಸ್ವೀಕಾರವಾಗಲಿ.

"ಏಕದಂತಾಯ ವಿದ್‌ಮಹೇ| ವಕ್ರತುಂಡಾಯ ಧೀಮಹೀ | ತನ್ನೊದಂತೀ ಪ್ರಚೋದಯಾತ್" (೮)

**ಅರ್ಥ** - ನಾವು ಈ ಏಕದಂತ ಗಣಪತಿಯನ್ನು ಗುರಿತ್ತುಸುತ್ತೇವೆ. ಇದೇ ವಕ್ರತುಂಡ ಗಣೇಶನನ್ನು ನಾವು ಧ್ಯಾನಿಸುತ್ತೇವೆ. ಆದುದರಿಂದಲೇ ನಾವು ನಮಗೆ ಸದ್‌ಭಕ್ತಿಯ ಪ್ರೇರಣೆ ಸಿಗಲೆಂದು ಗಣಪತಿಯನ್ನು ಪ್ರಾರ್ಥಿಸುತ್ತೇವೆ.

**ಶ್ಲೋಕ** - ಏಕದಂತಂ ಚತುರ್ಹಸ್ಥಂ ಪಾಶ ಮಂಕುಶ ಧಾರಿಣಂ| ರಂದಚ ವರದಂ ಹಸ್ತೈರ್ಬಿ ಭ್ರಾಣ
ಮೂಷಕ ಧ್ವಜಂ|| ರಕ್ತಂ ಲಂಬೋದರಮ್ ಶೂರ್ಪ ಕರ್ಣಕಂ ರಕ್ತಪಾಸಸನ್| ರಕ್ತಾ ಗಂಧಾನುಲಿಪ್ತಾಂಗಂ ರಕ್ತ ಪ್ರುಷ್ಪೈ ಸುಪೂಜಿತಂ| ಭಕ್ತಾನು ಕಂಪಿನಂದೇವಂ ಜಗತ್ಕಾರಣ ಮಚ್ಯುತ್ತಂ| ಅವಿರ್ಭೂತಂ ಚಸೈಷ್ಟಯಾಪಾ ಪ್ರಕೃತ್ತೇಃ ಪುರುಷಾತ್ಪರಮ್ ಏದಂಧ್ಯಾಯತಿ ಯೋ ನಿತ್ಯಂ ಸ ಯೋಗೀ ಯೋಗೀನಾಂವರ ||೯||

**ಅರ್ಥ** - ಗಣೇಶನಿಗೆ ಬಲಗಡೆ ಒಂದೇ ಹಲ್ಲಿದೆ. ನಾಲ್ಕು ಕೈಗಳಿವೆ. ಅವರ

✍ ಸಿ. ಆರ್. ಅನ್ನಪೂರ್ಣ

ಮೇಲಿನ ಬಲಗೈಯಲ್ಲಿ ಪಾಶವೂ ಮತ್ತು ಮೇಲಿನ ಎಡಗೈಯಲ್ಲಿ ಅಂಕುಶವೂ ಇದೆ. ಕೇಲಗಿನ ಬಲಗೈಯಲ್ಲಿ ಆನೆಯ ದಂತವಿದೆ ಮತ್ತು ಕೆಳಗಿನ ಎಡಗೈಯಲ್ಲಿ ವರದ ಮುದ್ರೆ ಧರಿಸಿದ್ದಾರೆ. ಮೂಷಕವು ಅವನ ವಾಹನವಾಗಿದೆ. ಗಣಪತಿಯು ಕೆಂಪು ವರ್ಣದವನಾಗಿದ್ದಾನೆ. ಮತ್ತು ದೊಡ್ಡ ಹೊಟ್ಟೆಯುಳ್ಳವನಾಗಿದ್ದಾನೆ. ಅವನ ಕಿವಿಗಳು ಅಗಲವಾಗಿದೆ. ಅವನು ಕೆಂಪು ವಸ್ತ್ರವನ್ನು ಧರಿಸಿದ್ದಾನೆ. ಅವನ ಶರೀರಕ್ಕೆ ರಕ್ತ ಚಂದನದ ಲೇಪನ ಹಚ್ಚಿದ್ದಾರೆ. ರಕ್ತ ಪುಷ್ಪ ಎಂದರೆ ಕೆಂಪು ಹೂವುಗಳಿಂದ ಅವನ ಪೂಜೆ ಮಾಡಲ್ಪಡುತ್ತದೆ. ತಮ್ಮ ಭಕ್ತರ ವಿಷಯದಲ್ಲಿ ಗಣಪತಿಯು ತುಂಬಾ ಕೃಪಾಳುವಾಗಿದ್ದಾನೆ. ಅವನೇ ಇಡೀ ಸಂಸಾರಕ್ಕೆ ಆದಿ ಕಾರಣನು. ವಿನಾಯಕನು ಅವಿನಾಶನೂ ಮತ್ತು ಸಷ್ಟಿಗೆ ಮೊದಲೇ ಪ್ರಕಟವಾದವನು. ಇವನು ಪ್ರಕೃತಿ ಮತ್ತು ಪುರುಷ ಇಬ್ಬರಿಗೂ ನಿಲುಕಲಾರದವನು. ಇಂತಹ ಗಣೇಶನನ್ನು ಯಾರು ಧ್ಯಾನ ಮಾಡುವರೋ ಅವರು ಎಲ್ಲ ಯೋಗಿಗಳಿಗಿಂತಲೂ ಶ್ರೇಷ್ಠರು.

**ಶ್ಲೋಕ** - ನಮೋ ವ್ರಾತಪತಯೇ ನಮೋ ಗಣಪತೆಯೇ| ನಮಃ ಪ್ರಥಮ ಪತಯೇ ನಮಸ್ತೇತು ಲಂಬೋದರಾಯ, ಏಕದಂತಾಯ ವಿಘ್ನನಾಶನೇ ಶಿವ ಸುತಾಯ|
ಶ್ರೀ ವರದ ಮೂರ್ತಯೇ ನಮೋ ನಮಃ ||೧೦||

**ಅರ್ಥ** - ದೇವ ಸಮೂಹ ಸ್ವಾಮಿಗೆ ನ್ನ ಪ್ರಣಾಮ ಸ್ವೀಕಾರವಾಗಲಿ. ಶಿವಗಣದ ಅಧಿಪತಿಗೆ ನಾನು ಪ್ರಣಾಮ ಮಾಡುತ್ತೇನೆ. ಏಕದಂತ ಗಣಪತಿಗೆ ನಾನು ನಮಸ್ಕಾರ ಮಾಡುತ್ತೇನೆ. ವಿಘ್ನಗಳನ್ನು ನಾಶ ಮಾಡುವ ಗಜಾನನನಿಗೆ ನನ್ನ ವಂದನೆಗಳು. ಶಿವಪುತ್ರ ಗಣೇಶನಿಗೆ ನನ್ನ ನಮನಗಳು. ಇಚ್ಛಿತ ವರ ಕೊಡುವ ಈ ವರ ಕೊಡುವ ಈ ವರದ ಮೂರ್ತಿಗೆ ನಾನು ಪುನಃ ನಮಸ್ಕರಿಸುತ್ತೇನೆ.

ಇಲ್ಲಿಂದ ಮುಂದೆ ಅಥರ್ವ ಶೀರ್ಷದ ಫಲಶೃತಿಯು ಪ್ರಾರಂಭವಾಗುತ್ತದೆ.

**ಶ್ಲೋಕ** - ಏತದ್ ಥರ್ವ ಶೀರ್ಷಯೇ ಧಿತೇ| ಸಬ್ರಹ್ಮ ಭೂಯಾಯ ಕಲ್ಪತೇ||
ಸ ಸರ್ವತಃ ಸುಖ ಮೇಧತೇ| ಸರ್ವ ವಿಘ್ನೈರ್ನ್ ಭಾದ್ಯತೆ|
ಸ ಪಂಚ ಮಹಾ ಪಾಸತ್ ಪ್ರಮುಚ್ಯತೇ||

# ಮುಂಬಯಿ ಕನ್ನಡ ರಂಗಭೂಮಿಗೆ ವಿಶಿಷ್ಟ ಸೇವೆ

ತಮ್ಮ ಸ್ಮರಣೀಯ ಅಭಿನಯದಿಂದ ಮುಂಬಯಿ ಮತ್ತು ಕನ್ನಡ ರಂಗಭೂಮಿಯ ಬೆಸುಗೆಯಾಗಿ ಶೋಭಿಸಿರುವ ಕಲಾವಿದೆ ಶ್ರೀಮತಿ ಕಿಶೋರಿ ಬಲ್ಲಾಳ್ ಅವರಿಗೆ ಪ್ರದಾನಿಸಲಾಯಿತು.



'ಶ್ರೀ. ಲೋಕೇಶ್ ಪ್ರಶಸ್ತಿ'ಯನ್ನು ತಮ್ಮ ಸೃಜನಾತ್ಮಕ ಸಾಂಸ್ಕೃತಿಕ ಚಳುವಳಿಯ ಕಾರಣದಿಂದಾಗಿ ರಂಗಭೂಮಿ ಹಾಗೂ ಚಲನಚಿತ್ರಗಳಿಗೆ ಹೊಸ ಆಯಾಮ ನೀಡಿದ ಪ್ರಗತಿಪರ ನಿರ್ದೇಶಕ, ಚಿಂತಕ ಮತ್ತು ಕಲಾವಿದ.

ಶ್ರೀ. ಸದಾನಂದ ಸುವರ್ಣ ಅವರಿಗೆ ಪ್ರದಾನಿಸಲಾಯಿತು. ಶ್ರೀಮತಿ ಗಿರಿಜಾ ಲೋಕೇಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಶಸ್ತಿ ವಿಜೇತರು ಸಹ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ವೇದಿಕೆಯಲ್ಲಿ



ಮೈಸೂರು ಅಸೋಸಿಯೇಷನ್ ಅಧ್ಯಕ್ಷರಾದ ವಿ. ರಾಮಭದ್ರ ಹಾಗೂ ಡಾ. ಬಿ. ಆರ್. ಮಂಜುನಾಥ್ ಅವರು ಉಪಸ್ಥಿತರಿದ್ದರು. ಪ್ರಶಸ್ತಿ ಪ್ರದಾನ ಸಮಾರಂಭದ ನಂತರ ಕನ್ನಡ ಸಿನಿಮಾದ ಹೆಸರಾಂತ ನಟಿ ಶ್ರೀಮತಿ ಪೂಜಾ ಲೋಕೇಶ್ ಅವರ ಸಂಯೋಜಿತ ನೃತ್ಯದೊಂದಿಗೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದ ನಿರೂಪಣೆಯನ್ನು ಮೈಸೂರು ಅಸೋಸಿಯೇಷನ್ ಸದಸ್ಯೆ ಶ್ರೀಮತಿ ರಮಾವಸಂತ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಸಾಯ ಮಧೀಯಾನೋ ದಿವಸಕೃತಂ ಪಾಪಂ ನಾಶ್ಯತಿ|
ಪ್ರಾತರಧೀಯನೋ ರಾತ್ರಿ ಕೃತಂ ಪಾಪನಾಶಯತಿ||
ಸಾಯಂಪ್ರಾತಃ ಪ್ರಯುಂಜಾನೋ ಅಪಾಪೋ ಭವತಿ||
ಸರ್ವತ್ರಧೀಯಾನೋ ಪವಿಘ್ನೋ ಭವತಿ ಧರ್ಮಾರ್ಥ ಕಾಮ ಮೋಕ್ಷಂಚ ವಿದತಿ||
ಇದಮಥರ್ವ ಶೀರ್ಷಮಷ್ಯಾಯ ನ ದೇಯಮ|
ಯೋಯಧಿ ಮೋಹಾದ್ದಶ್ಯತಿ ಸ ಪಾಪಿಯಾನ ಭವತಿ|
ಸಹಸ್ರಾವರ್ತ ನಾಥಯಯಂ ಕಾಮ ಮಧೀತೆ ತಂ ತಮನೆನೆ ಸಾಧಯೇತ ||೧೧||

**ಅರ್ಥ** - ಯಾರು ಅಥರ್ವ ಶೀರ್ಷವನ್ನು ಮನಃ ಪೂರ್ವಕವಾಗಿ ಅಧ್ಯಯನ ಮಾಡುವರೋ ಅವರಿಗೆ ಬ್ರಹ್ಮ ಸ್ವರೂಪವು ಪ್ರಾಪ್ತಿಯಾಗುತ್ತದೆ. ಯಾವುದೇ ವಿಘ್ನಗಳು ಅವರನ್ನು ಬಾಧಿಸಲಾರವು. ಅವರಿಗೆ ಎಲ್ಲಾ ಕಡೆಯಿಂದಲೂ ಸುಖವೇ ಸಿಗುತ್ತದೆ. ಅವರಿಗೆ ಆದು ಪಾತಕಗಳಿಂದ ಮುಕ್ತಿಹೊಂದುತ್ತಾರೆ. ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಂಜೆ ಅಥರ್ವ ಶೀರ್ಷವನ್ನು ಪಠಣ ಮಾಡುವ ಮನುಷ್ಯ ಎಲ್ಲಾ ರೀತಿಯಲ್ಲೂ ನಿಷ್ಪಾಪನಾಗುತ್ತಾನೆ. ಅವನಿಗೆ ಧರ್ಮ ಅರ್ಥ ಕಾಮ ಮೋಕ್ಷ ಈ ನಾಲ್ಕು ಪುರುಷಾರ್ಥಗಳೂ ಪ್ರಾಪ್ತವಾಗುತ್ತದೆ. ಈ ಅಥರ್ವ ಶೀರ್ಷದ ಶಿಕ್ಷೆಯನ್ನು ಅಶ್ರದ್ಧರಿಗಾಗಲೀ ಅಥವಾ ಇದನ್ನು ದುರುಪಯೋಗಪಡಿಸುವವರಿಗಾಗಲೀ ಕೊಡಬಾರದು. ಒಂದು ವೇಳೆ ಮೋಹದಿಂದಾಗಲೀ ಅಥವಾ ಅಜ್ಞಾನದಿಂದಾಗಲೀ ಈ ಅಥರ್ವ ಶೀರ್ಷೆಯನ್ನು ಅಂತಹವರಿಗೆ ಹೇಳಿಕೊಟ್ಟಲ್ಲಿ ಅವನು ಮಹಾ ಪಾಪಿಯಾಗುವನು. ಈ ಅಥರ್ವ ಶೀರ್ಷೆಯನ್ನು ಸಹಸ್ರಾವರ್ತನೆ (ಒಂದು ಸಾವಿರ ಬಾರಿ) ಪಠಣೆ ಮಾಡಿದಲ್ಲಿ ಮನಸ್ಸಿನ ಇಚ್ಛೆಗಳೆಲ್ಲಾ ಫಲಿಸುವುವು.

ಶ್ಲೋಕ ಅನೇನ ಗಣಪತಿ ಮಭಿಷಿಂಚತೀ ಸರ್ವಾಗ್ಮೀ ಭವತೀ ||
ಚತುರ್ಯಾಮನಶ್ರನ ಜಪತೀ ಸವಿದ್ಯಾವಾನ ಭವತಿ|
ಇತ್ಯಥರ್ವಣ ವಾಕ್ಯಂ| ಬ್ರಹ್ಮಾದ್ಯಾಚರಣಂ ವಿಧ್ಯಾತ| ನವಿಭೇತಿ ಕದಾಚನೇತಿ ||೧೨||

**ಅರ್ಥ** - ಅಥರ್ವ ಶೀರ್ಷದಿಂದ ಅಭಿಷೇಕ ಮಾಡುವವನು ಉತ್ತಮ ವ್ಯಕ್ತಿಯೆನಿಸುವನು. ಚತುರ್ಥಿಯ ದಿವಸ ನಿರ್ಜಲ ಉಪವಾಸ ಮಾಡಿ ಅಥರ್ವ ಶೀರ್ಷವನ್ನು ಜಪಿಸುವವನು ವಿದ್ಯಾಸಂಪನ್ನನಾಗುವನು. ಹೀಗೆಂದು ಅಥರ್ವ ಶೀಷೆಯ ವಚನವಿದೆ. ಬ್ರಹ್ಮ ಸೃಷ್ಟಿಸಿದ ಈ ಪ್ರಪಂಚ ಮಾಯೆಯ ಜಾಲವಾಗಿದೆ. ಇದನ್ನರಿತ ಮನುಷ್ಯನು ಯಾವಾಗಲೂ ಮತ್ತು ಯಾವ ಪರಿಸ್ಥಿತಿಯಲ್ಲೂ ಭಯಭೀತನಾಗುವುದಿಲ್ಲ.

**ಶ್ಲೋಕ** - ಯೋ ದುರ್ವಾಂಶುರೈರ್ಯಜತಿ ಸ ವೈಶ್ರವಣೋ ಪಮೋಭವತಿ|
ಯೋ ಲಾ ದೈರ್ಯ ಜತಿ ಸಯಶೋವಾನ ಭವತೀಸ ಮೇಧಾವಾನ್ ಭವತಿ|
ಯೋ ಮೋದಕ ಸಹಸ್ರೇಣ ಯಜತಿಸ ವಾಂಛ್ಚಿತ ಮವಾಪ್ನೋತಿ|
ಯಃ ಸಾಜ್ಯ ಸಮಿಬ್ದಿರ್ಯಜತಿ ಸ ಸರ್ವ ಭತೇ ವಸರ್ವಲಾಭತೇ ||೧೩||

ಅರ್ಥ ಯಾರು ದೂರ್ವೆಯಿಂದ ಹವನ ಮಾಡುವರೋ ಅವರು ಕುಬೇರನಂತೆ ಧನಿಷ್ಟರಾಗುವರು. ಯಾರು ಅಕ್ಕಿಯಿಂದ ಹವನ ಮಾಡುವರೋ ಅವರು ಕೀರ್ತಿವಂತರಾಗುವರು, ಬುದ್ಧಿವಂತರೂ ಆಗುವರು. ಯಾರು ಸಹಸ್ರ ಮೊದಕಗಳಿಂದ ಹವನ ಮಾಡುವರೋ ಅವರಿಗೆ ಇಚ್ಛಿತ ಫಲ ಪ್ರಾಪ್ತಿಯಾಗುವುದು. ಯಾರು ತುಪ್ಪದೊಂದಿಗೆ ಸಂಪೂರ್ಣ ಸಮಿಧೆಯಿಂದ ಹವನ ಮಾಡುವರೋ ಅವರಿಗೆ ಎಲ್ಲವೂ ಪ್ರಾಪ್ತಿಯಾಗುವುವು.

**ಶ್ಲೋಕ** - ಅಷ್ಟೌ ಬ್ರಾಹ್ಮಣಾನ್ ಸಮ್ಯಗ್ರಾಹಯಿತ್ವಾ ಸೂರ್ಯ ವರ್ಚಸ್ವೀ ಭವತಿ|
ಸೂರ್ಯಗ್ರಹೇ ಮಹಾನದ್ಯಾ ಪ್ರತಿಮಾಂಸ ನಿಧೌ ವಾಜಪ್ತ್ವಾಂ ಸಿದ್ಧಂಮತ್ರೋ ಭವತಿ|
ಮಹಾವಿಘ್ನತ್ಪ್ರಮುಚ್ಯತೇ| ಮಹಾ ದೋಷ ಪ್ರಮುಚ್ಯತೇ|
ಮಹಾ ಪಾಪಾತ ಪ್ರಮುಚ್ಯತೇ| ಸಸರ್ವಾವಿದ್ವವತಿ ಸ ಸರ್ವವಿದ್ಭವತಿ|
ಯ ಏವಂ ವೇದ ಇತ್ಯುಪನಿಶಧ್ || ೧೪ ||

(ಮುಂದುವರಿಯುವುದು...)

Date of Publication : 10th of every month RNI No. 040015 / 83
MH / MR / North East / 093 / 2012- 2014 Date of Posting : 10th of every month at Mumbai Patrika Channel Sorting Office G.P.O.



ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ ಅವರು ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸುತ್ತಿರುವ ಸಂದರ್ಭ

## ಅಸೋಸಿಯೇಶನ್‌ನಲ್ಲಿ ಮುಂಬರುವ ಕಾರ್ಯಕ್ರಮಗಳು

**25.07.2014ರ ಶುಕ್ರವಾರ ಸಂಜೆ 7.00ಕೆ ಶ್ರೀಮತಿ ಗಾಯತ್ರಿ ಸುಂದರೇಶನ್ ಅವರಿಂದ "ರಾಮ ಗೋವಿಂದ ಹರಿ" ಎಂಬ ಎಂ.ಎಸ್. ಸುಬ್ಬುಲಕ್ಷ್ಮೀ ಅವರ ಭಜನೆಗಳ ಆಧಾರಿತ ಕಾರ್ಯಕ್ರಮ**

## MATRIMONIAL

Alliance for Brahmin Smartha Boy Age 30 years, Kaushik Gotra, Simha Rashi, Magha Nakshatra, Height 5'.11", Fair complexion, B.Com Graduate working in International Global Service in Mumbai, earning Rs.45,000/- per month. Girl wanted with service in Mumbai (Smartha or Madhava), Graduate age between (25-28 years) Height 5'.5" to 5'.8", Good looking.

Contact : Mrs. Meenakshi V. Begoor – 022-28970741 / 9892588861 / 9930466951

## ಅಡುಗೆ ವಿಶೇಷ :

### ಫಾಲಕ್ ಫಲಾವು



**ಬೇಕಾಗುವ ಪದಾರ್ಥಗಳು:**

| | |
|---|---|
| ಪಾಲಕ್ 10 ಎಲೆ, | ಹಸಿಮೆಣಸಿನ ಕಾಯಿ – 2 |
| ಶುಂಠಿ – 1ಚೂರು, | ಲವಂಗ– 5 |
| ಏಲಕ್ಕಿ – 1 | ಹುರುಳಿಕಾಯಿ – 1 ಬಟ್ಟಲು |
| ಕ್ಯಾರೆಟು– 1 ಬಟ್ಟಲು | ಆಲೂಗಡ್ಡೆ – 1 ಬಟ್ಟಲು |
| ಹೂಕೋಸು – 1 ಬಟ್ಟಲು | ಈರುಳಿ |
| ಗೋಡಂಬಿ | ಫಲಾವು ಎಲೆ |
| ಸಾಸಿವೆ | ಎಣ್ಣೇ |
| ತುಪ್ಪ | ಚಕ್ಕೆ |
| ಅಕ್ಕಿ 1 bowl | ನೀರು |
| ಉಪ್ಪು ರುಚಿಗೆ ತಕ್ಕಷ್ಟು | |

**ಮಾಡುವ ವಿಧಾನ:**

ಮೊದಲು ಒಂದು pan ಗೆ ಫಾಲಕ್ಕ್ ಎಲೆ, ಹಸಿಮೆಣಸಿನಕಾಯಿ ಮತ್ತು ಸ್ವಲ್ಪ ಎಣ್ಣೆ ಹಾಕಿ ಹಸಿವಾಸನೆ ಹೋಗುವವರೆಗೂ ಹುರಿಯಬೇಕು. ನಂತರ mixi jar ಗೆ ಹುರಿವ ಪಾಲಕ್, ಲವಂಗ, ಶುಂಠಿ, ಚಕ್ಕೆ, ಈರುಳ್ಳಿ ಹಾಕಿ ಗ್ರೈಂಡ್ ಮಾಡಬೇಕು. ನಂತರ ಕುಕ್ಕರ್‌ಗೆ ಎಣ್ಣೆ ಹಾಕಿ ಕಾದ ನಂತರ ಸಾಸಿವೆ, ಈರುಳ್ಳಿ, ಫಲಾವು ಎಲ್ಲ ಹಾಕಿ ನಂತರ ಕತ್ತರಿಸಿದ ತರಕಾರಿ ಹಾಕಬೇಕು. ಹಾಗೆ ಪೇಸ್ಟ್ ಹಾಕಿ ಫ್ರೈ ಮಾಡಬೇಕು. ನಂತರ ನೀರು ಮತ್ತು ಉಪ್ಪು ಹಾಕಿ ಮುಚ್ಚಬೇಕು. 3 ಸೀಟಿ ಆದಮೇಲೆ ಗೋಡಂಬಿ, ತುಪ್ಪ ಫ್ರೈ ಮಾಡಿ ಫಾಲಕ್ ಫಲಾವು ರೆಡಿ.

- ಸೌಮ್ಯ ಕೆ. ಪ್ರಸಾದ್

## Gajar Halwa



Ingredients:

Carrot – ¼ kg

Milk – 200 ml

Sugar – 300 ml

Elchi – 4- powdered

Ghee – 4 tsp

**Method**

Chop the carrot and boil or cook with milk for 10 mins. Add sugar and cook on gas for another 5 mins. As the mixture starts thickening add ghee. As the mixture starts leaving the side add Elchi powder and remove from heat. Pour into a plate and cut into pieces. Decorate with dry nuts if necessary.

- Nirmala S. Rao

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938